# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 17, 2024

ಸಂಪುಟ : 51 ಸಂಚಿಕೆ : 125 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಈದ್ ಮಿಲಾದ್ ಸಂಭ್ರಮ

ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನದ ಅಂಗವಾಗಿ ಈದ್ ಮಿಲಾದ್ ಹಬ್ಬವನ್ನು ದಾವಣಗೆರೆಯಲ್ಲಿ ಸೋಮವಾರ ಸಂಭ್ರಮದಿಂದ ಆಚರಿಸಲಾಯಿತು. ಜಯದೇವ ವೃತ್ತದಲ್ಲಿ ಯುವಕರು ಡಿಜೆ ಹಾಡಿಗೆ ನೃತ್ಯ ಮಾಡಿದರು.

# ಕಲ್ಯಾಣದ ಅಭಿವೃದ್ಧಿ

## ಬಿಜೆಪಿ ಹಗರಣ: ಇಂದಿನ ಕಲಬುರಗಿ ವಿಶೇಷ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ

ಬೆಂಗಳೂರು, ಸೆ. 16 - ಬಿಜೆಪಿ ಆಡಳಿತದಲ್ಲಿನ ಭ್ರಷ್ಟಾಚಾರ ಹಗರಣಗಳನ್ನು ತನಿಖೆಗೆ ವಹಿಸುವ ಸಂಬಂಧ ನಾಳೆ ಕಲಬುರಗಿಯಲ್ಲಿ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ.

ಹತ್ತು ವರ್ಷಗಳ ನಂತರ ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷ ಸಚಿವ ಸಂಪುಟ ಸಭೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದು, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೆಲವು ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಆಡಳಿತದಲ್ಲಿ 40 ಪರ್ಸೆಂಟ್ ಕಮಿಷನ್, ಕೋವಿಡ್-19 ಸೇರಿದಂತೆ 21 ಹಗರಣಗಳ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಅವರು ವಿಧಾನಸಭೆಯಲ್ಲೇ ಘೋಷಣೆ ಮಾಡಿದ್ದರು.

ಈ ಹಗರಣಗಳಿಗೆ ಸಂಬಂಧಿಸಿದಂತೆ ಯಾವ

**ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿನ ಜನರಿಗೆ ಉದ್ಯೋಗಾವಕಾಶಗಳ ಬಗ್ಗೆ ಹಾಗೂ ಪ್ರತ್ಯೇಕ ಸಚಿವಾಲಯ ರಚನೆ ಬಗ್ಗೆಯೂ ಕಲಬುರಗಿ ಸಚಿವ ಸಂಪುಟ ಸಭೆ ಚರ್ಚಿಸಲಾಗುವುದು. ಸರ್ಕಾರ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಪರವಾಗಿದೆ.**


**- ಸಿದ್ಧರಾಮಯ್ಯ, ಮುಖ್ಯಮಂತ್ರಿ**

ಮಟ್ಟದಲ್ಲಿ ತನಿಖೆ ನಡೆದಿದೆ ಮತ್ತು ಅದರ ಪ್ರಗತಿ ಏನು ಎಂಬ ಬಗ್ಗೆ ಪರಾಮರ್ಶೆ ನಡೆಸಿ ವರದಿ ನೀಡಲು ಸಚಿವಜಿ.ಪರಮೇಶ್ವರ್ ಅಧ್ಯಕ್ಷತೆಯಲ್ಲಿ ಐವರು ಸಚಿವರ ಸಂಪುಟ ಉಪಸಮಿತಿ ರಚಿಸಿದ್ದರು.

ಸಮಿತಿ ಕಳೆದ ವಾರ ಸಭೆ ಸೇರಿ 4 ಹಗರಣಗಳಿಗೆ ಸಂಬಂಧಿಸಿದಂತೆ ನಡೆದಿರುವ ತನಿಖೆಗೆ ಆರೋಪ ಪಟ್ಟಿ ಸಲ್ಲಿಸಲು ಸಂಪುಟಕ್ಕೆ ಶಿಫಾರಸು ಮಾಡಿದ್ದಾರೆ.

ನಾಲ್ಕು ಹಗರಣಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚೆ ನಡೆಸಿ ಮುಂದಿನ ಕಾನೂನು **(4ನೇ ಪುಟಕ್ಕೆ)**

## ಟ್ರಂಪ್ ಹತ್ಯೆಗೆ ಮತ್ತೊಂದು ಯತ್ನ



ವಾಷಿಂಗ್ಟನ್, ಸೆ. 16 - ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗಾಲ್ಫ್ ಆಡುತ್ತಿದ್ದ ಸ್ಥಳದ ಸಮೀಪದಲ್ಲಿ, ವ್ಯಕ್ತಿಯೋರ್ವ ಗುಂಡು ಹಾರಿಸಿದ ಘಟನೆ ನಡೆದಿದೆ.

ಟ್ರಂಪ್ ಮೇಲೆ ನಡೆಸಲಾದ ಎರಡನೇ ಹತ್ಯೆ ಯತ್ನ ಇದಾಗಿದೆ. ಫ್ಲೋರಿಡಾದ ವೆಸ್ಟ್ ಪಾಮ್ ಬೀಚ್‌ನಲ್ಲಿರುವ ಟ್ರಂಪ್ ಇಂಟರ್‌ನ್ಯಾಷನಲ್ ಗಾಲ್ಫ್ **(4ನೇ ಪುಟಕ್ಕೆ)**

## ಹಳಿ ತಪ್ಪಿದ ಗೂಡ್ಸ್ ರೈಲು

ಭೂಪಾಲ್, ಸೆ. 16 – ಬೆಂಗಳೂರಿಗೆ ತೆರಳುತ್ತಿದ್ದ ಗೂಡ್ಸ್ ರೈಲಿನ 3 ಬೋಗಿಗಳು ಹಳಿ ತಪ್ಪಿವೆ. ಭೂಪಾಲ್ ಬಳಿಯ ಮಿಸ್ರೋದ್ ಎಂಬಲ್ಲಿ ಈ ಘಟನೆ ನಡೆದಿದೆ. ಮಧ್ಯಾಹ್ನ 12.45ರ ಸಮಯದಲ್ಲಿ ಅಪಘಾತ ಸಂಭವಿಸಿದೆ. ಈ ಮಾರ್ಗವನ್ನು ಸಂಚಾರಕ್ಕೆ ಮತ್ತೆ ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

# ಯುವನಿಧಿಯಲ್ಲೂ ಹೆಣ್ಮಕ್ಕಳೇ ಸ್ಟ್ರಾಂಗು!

## ನಿರುದ್ಯೋಗ ನೆರವು ಪಡೆವಲ್ಲಿ ಪುರುಷರಿಗಿಂತ ಮಹಿಳೆಯರೇ ಮುಂದೆ

ದಾವಣಗೆರೆ, ಸೆ. 16 - ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಗೃಹ ಲಕ್ಷ್ಮಿ, ಶಕ್ತಿ ಹಾಗೂ ಅನ್ನಭಾಗ್ಯ ಯೋಜನೆಗಳು ಮಹಿಳೆಯರಿಗೆ ಮೀಸಲಾಗಿವೆ. ಇದರ ಜೊತೆಗೆ ಯುವನಿಧಿ ಯೋಜನೆಯಲ್ಲೂ ಹೆಣ್ಣು ಮಕ್ಕಳೇ ಹೆಚ್ಚಿನ ಫಲಾನುಭವಿಗಳಾಗಿದ್ದಾರೆ.

ಪದವಿ ಹಾಗೂ ಡಿಪ್ಲೋಮಾ ಪದವಿ ಪಡೆದವರು ನಿರುದ್ಯೋಗಿಗಳಾಗಿದ್ದರೆ, ಯುವನಿಧಿ ಯೋಜನೆಯ ಮೂಲಕ ನೆರವು ನೀಡಲಾಗುತ್ತಿದೆ. ಪದವಿದಾರರಿಗೆ ತಿಂಗಳಿಗೆ 3 ಸಾವಿರ ರೂ. ಹಾಗೂ ಡಿಪ್ಲೋಮಾ ಫಲಾನುಭವಿಗಳಿಗೆ 1,500 ರೂ. ನೀಡಲಾಗುತ್ತಿದೆ.

ಈ ಯೋಜನೆಗೆ ಜಿಲ್ಲೆಯಲ್ಲಿ 12,390 ಫಲಾನುಭವಿಗಳಿದ್ದಾರೆ. ಇವರ ಪೈಕಿ ಪುರುಷರು 5,667 ಇದ್ದರೆ, ಮಹಿಳಾ ಫಲಾನುಭವಿಗಳ ಸಂಖ್ಯೆ 6,723 ಆಗಿದೆ.

ಜಗಳೂರು ತಾಲ್ಲೂಕಿನಲ್ಲಿ ಮಾತ್ರ




ಮಹಿಳಾ ಫಲಾನುಭವಿಗಳ ಸಂಖ್ಯೆ ಕಡಿಮೆ ಇದೆ. ಇಲ್ಲಿ ಮಹಿಳಾ ಫಲಾ ನುಭವಿಗಳ ಸಂಖ್ಯೆ 532 ಆಗಿದ್ದರೆ, ಪುರುಷ ಫಲಾನುಭವಿಗಳ ಸಂಖ್ಯೆ 665 ಆಗಿದೆ. ದಾವಣಗೆರೆಯಲ್ಲಿ 2,460 ಪುರುಷ ಹಾಗೂ 3,040 ಮಹಿಳಾ ಫಲಾನುಭವಿ ಗಳಿದ್ದಾರೆ. ಚನ್ನಗಿರಿಯಲ್ಲಿ 1,038 ಪುರುಷ ಹಾಗೂ 1,268 ಮಹಿಳೆಯರಿದ್ದಾರೆ.

ಹೊನ್ನಾಳಿಯಲ್ಲಿ 478 ಪುರುಷ ಹಾಗೂ 602 ಮಹಿಳೆಯರಿದ್ದಾರೆ. ನ್ಯಾಮತಿಯಲ್ಲಿ 257 ಪುರುಷ ಹಾಗೂ 261 ಮಹಿಳೆಯರಿದ್ದಾರೆ. ಹರಿಹರದಲ್ಲಿ 769 ಪುರುಷ ಹಾಗೂ 1,020 ಮಹಿಳೆಯರಿದ್ದಾರೆ.

ಪದವಿ ಶಿಕ್ಷಣ ಪೂರೈಸಿದ ನಂತರ ಉದ್ಯೋಗದಲ್ಲಿ ತೊಡಗುವವರು ಹಾಗೂ ಉನ್ನತ ಶಿಕ್ಷಣಕ್ಕೆ ತೆರಳುವವರಿಗೆ ಯುವನಿಧಿ ಲಭ್ಯವಾಗುವುದಿಲ್ಲ.

ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಹಾಗೂ ಉನ್ನತ ಶಿಕ್ಷಣಕ್ಕೆ ತೆರಳುತ್ತಿರುವ ಕಾರಣ ಫಲಾನುಭವಿಗಳ ಸಂಖ್ಯೆ ಕಡಿಮೆ ಇದೆ ಎಂದು ಮೂಲಗಳು ತಿಳಿಸಿವೆ.

ಹೀಗಾಗಿ ಒಂದು ರೀತಿ ಮಹಿಳಾ ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿ ರುವುದು ಚಿಂತೆಗೀಡು ಮಾಡುವ ವಿಷಯವೂ ಆಗಿದೆ. ಉನ್ನತ ಶಿಕ್ಷಣ ಹಾಗೂ ಉದ್ಯೋಗಕ್ಕೆ ಮಹಿಳೆಯರ ಸೇರ್ಪಡೆ ಪ್ರಮಾಣ ಹೆಚ್ಚಿಸುವ ಬಗ್ಗೆ ಚಿಂತನೆಯ ಅಗತ್ಯವಿದೆ ಎಂಬುದನ್ನೂ ಈ ಮಾಹಿತಿ ತೋರಿಸುತ್ತಿದೆ.

## ಮೊದಲ ವಂದೇ ಭಾರತ್ ಮೆಟ್ರೋಗೆ ಚಾಲನೆ



ಮೆಟ್ರೋ ರೈಲು ಯೋಜನೆ ಉದ್ಘಾಟಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಮೆಟ್ರೋದಲ್ಲಿ ಸವಾರಿ ಮಾಡಿದರು.

ಅಹಮದಾಬಾದ್, ಸೆ. 16 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಭುಜ್ ಮತ್ತು ಅಹಮದಾಬಾದ್ ನಡುವೆ ಸಂಚರಿಸಲಿರುವ ನಮೋ ಭಾರತ್ ರಾಪಿಡ್ ರೈಲಿಗೆ ಚಾಲನೆ ನೀಡಿದ್ದಾರೆ. ಇದು ಮೊದಲ ವಂದೇ ಭಾರತ್ ಮೆಟ್ರೋ ಸೇವೆ ಆಗಿರಲಿದೆ.

ಇದೆ ವೇಳೆ ಪ್ರಧಾನಿ ಐದು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರಿದ್ದಾರೆ. ಮೂರನೇ ಅವಧಿಗೆ ಪ್ರಧಾನಿಯಾದ ನಂತರ ತವರು ರಾಜ್ಯವಾದ ಗುಜರಾತ್‌ಗೆ ಮೊದಲ ಬಾರಿ ಭೇಟಿ ನೀಡಿದ್ದ ಮೋದಿ ಸುಮಾರು 8 ಸಾವಿರ ಕೋಟಿ ರೂ. ಯೋಜನೆಗಳಿಗೆ ಶಿಲಾನ್ಯಾಸ **(4ನೇ ಪುಟಕ್ಕೆ)**

# ದ್ವೇಷ ತುಂಬಿದವರಿಂದ ಭಾರತದ ತೇಜೋವಧೆ

ಅಹಮದಾಬಾದ್, ಸೆ. 16 - ದ್ವೇಷ ಹಾಗೂ ನಕಾರಾತ್ಮಕತೆ ತುಂಬಿರುವ ಕೆಲವರು ಭಾರತದ ತೇಜೋವಧೆಗೆ ಮುಂದಾಗಿದ್ದಾರೆ. ದೇಶದ ಐಕ್ಯತೆ ನಾಶ ಮಾಡಲು ಮುಂದಾಗಿದ್ದಾರೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಿಡಿ ಕಾರಿದ್ದಾರೆ.

ಗುಜರಾತ್‌ನಲ್ಲಿ 8,000 ಕೋಟಿ ರೂ.ಗಳ ಯೋಜನೆಗಳಿಗೆ ಶಿಲಾನ್ಯಾಸ ಹಾಗೂ ಉದ್ಘಾಟನೆ ನೆರವೇರಿಸಿದ ನಂತರ ಅವರು ಮಾತನಾಡಿದರು.

ಅಮೆರಿಕದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೀಡಿದ ಹೇಳಿಕೆಗಳಿಂದ ವಿವಾದ ಉಂಟಾಗಿರುವ ಮಧ್ಯೆ ಪ್ರಧಾನಿ ಈ ಮಾತುಗಳನ್ನು ಆಡಿದ್ದಾರೆ.

ಯಾರದೇ ಹೆಸರು ಹೇಳದೆ ಟೀಕಾ ಪ್ರಹಾರ ನಡೆಸಿದ ಪ್ರಧಾನಿ, ಮೋದಿ ಓಲೈಕೆ ರಾಜಕಾರಣದಲ್ಲಿ ಪ್ರತಿಪಕ್ಷಗಳು ಎಲ್ಲಾ ಮಿತಿಗಳನ್ನು ಮೀರಿದ್ದಾರೆ



ಎಂದಿದ್ದಾರೆ. ನಕಾರಾತ್ಮಕ ಧೋರಣೆಯ ಕೆಲವರು ಭಾರತದ ಐಕ್ಯತೆ ಹಾಗೂ ಸಮಗ್ರತೆ ಮೇಲೆ ದಾಳಿ ನಡೆಸುತ್ತಿದ್ದಾರೆ. ಅವರು ದೇಶ ವಿಭಜಿಸಲು ಉದ್ದೇಶಿಸಿದ್ದಾರೆ. ದ್ವೇಷವನ್ನೇ ತುಂಬಿಕೊಂಡಿರುವ ಅವರು ಭಾರತ ಮತ್ತು ಗುಜರಾತ್ ತೇಜೋವಧೆ ಮಾಡುವ ಯಾವುದೇ ಅವಕಾಶ ಬಿಡುತ್ತಿಲ್ಲ ಎಂದು ಮೋದಿ ಆರೋಪಿಸಿದರು.

### ಪ್ರಧಾನಿ ಮೋದಿ ತರಾಟೆ

ಸತತ 3ನೇ ಅವಧಿಗೆ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನೂರು ದಿನಗಳಲ್ಲಿ ಪ್ರತಿಪಕ್ಷಗಳು ತಮ್ಮನ್ನು ಅವಮಾನಿಸಿವೆ ಹಾಗೂ ವ್ಯಂಗ್ಯವಾಡಿವೆ. ಆದರೆ, ನಾನು ಈ ಅವಧಿಯಲ್ಲಿ ಅಭಿವೃದ್ಧಿಯ ಅಜೆಂಡ ಈಡೇರಿಸುವತ್ತ ಗಮನಹರಿಸಿದ್ದೇನೆ ಎಂದು ಮೋದಿ ಹೇಳಿದರು.

ಪ್ರತಿಯೊಬ್ಬ ನಾಗರಿಕ ಭಾರತವನ್ನು ಪ್ರತಿನಿಧಿಸಲು ಹಾಗೂ ವಿಶ್ವದಲ್ಲಿ ಭಾರತದ ರಾಯಭಾರಿಯಾಗಲು ಬಯಸುತ್ತಾನೆ. ದೇಶ ಮುನ್ನಡೆಯಲ್ಲಿ ಎಂದು ಬಯಸುತ್ತಾನೆ. ಆದರೆ, ನಕಾರಾತ್ಮಕ ಮನೋಭಾವದ **(3ನೇ ಪುಟಕ್ಕೆ)**

## ರಾಹುಲ್ ಗಾಂಧಿ ನಾಲಿಗೆ ಕತ್ತರಿಸಿದವರಿಗೆ ಬಹುಮಾನ ಎಂದ ಶಿವಸೇನೆ ಶಾಸಕ

ಮುಂಬೈ, ಸೆ. 16 - ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮೀಸಲಾತಿ ವ್ಯವಸ್ಥೆ ಅಂತ್ಯಗೊಳಿಸುವ ಹೇಳಿಕೆ ನೀಡಿರುವ ಕಾರಣ, ಅವರ ನಾಲಿಗೆ ಕತ್ತರಿಸಿದವರಿಗೆ 11 ಲಕ್ಷ ರೂ.ಗಳ ಬಹುಮಾನ ನೀಡುವುದಾಗಿ ಶಿವಸೇನೆ ಶಾಸಕ ಸಂಜಯ್ ಗಾಯಕ್ವಾಡ್ ವಿವಾದಿತ ಹೇಳಿಕೆ ನೀಡಿದ್ದಾರೆ. ಶಾಸಕ ನೀಡಿರುವ ಹೇಳಿಕೆಯನ್ನು ಬೆಂಬಲಿಸುವುದಿಲ್ಲ ಎಂದು ಮಹಾರಾಷ್ಟ್ರ ಬಿಜೆಪಿ ಅಧ್ಯಕ್ಷ ಚಂದ್ರಶೇಖರ ಬವಂಕುಳೆ ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಶಿವಸೇನೆ ಜೊತೆಗೂಡಿ ಬಿಜೆಪಿ ಸರ್ಕಾರ ರಚಿಸಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಮಹಾರಾಷ್ಟ್ರ ಕಾಂಗ್ರೆಸ್ ನಾಯಕ ಅತುಲ್ ಲೊಂಧೆ, ಸಮಾಜ ಹಾಗೂ ರಾಜಕೀಯದಲ್ಲಿರಲು ಸಂಜಯ್ ಗಾಯಕ್ವಾಡ್ ಅರ್ಹತೆ ಹೊಂದಿಲ್ಲ. ಮಹಾರಾಷ್ಟ್ರದ ಗೃಹ ಸಚಿವ ದೇವೇಂದ್ರ ಫಡ್ನವೀಸ್ ಅವರು ಶಾಸಕನ ವಿರುದ್ಧ ಹತ್ಯೆ ಯತ್ನ ಪ್ರಕರಣ ದಾಖಲಿಸಲಿದ್ದಾರೆಯೇ ಎಂಬುದನ್ನು ಕಾದು ನೋಡವುದಾಗಿ ಹೇಳಿದ್ದಾರೆ.

## ಪಂಚಾಯ್ತಿ ಚುನಾವಣೆ ನಡೆಸಲು ಹೆಚ್ಡಿಕೆ ಆಗ್ರಹ

ಬೆಂಗಳೂರು, ಸೆ. 16 - ಜಿಲ್ಲಾ, ತಾಲ್ಲೂಕು ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವಂತೆ ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್. ಡಿ.ಕುಮಾರಸ್ವಾಮಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಸ್ಥಳೀಯ ಸರ್ಕಾರಗಳ ಕತ್ತು ಹಿಸುಕಿ ನೀವು ವಿಧಾನಸೌಧದಲ್ಲಿ ಮೆರೆದರೆ ಭಾಗ್ಯ ಬರುವುದಿಲ್ಲ, ಮೊದಲು ಅವರಿಗೆ ಅಧಿಕಾರ ನೀಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು **(4ನೇ ಪುಟಕ್ಕೆ)**


॥ಶ್ರೀ ಕಲ್ಲೇಶ್ವರ ಪ್ರಸನ್ನ ॥



## ಕೈಲಾಸ ಶಿವಗಣಾರಾಧನೆ ಮತ್ತು ನುಡಿ ನಮನ ಕಾರ್ಯಕ್ರಮ





ದಾವಣಗೆರೆ ಸಿಟಿ ಆನೆಕೊಂಡ ವಾಸಿ

ಲಿಂ॥ ಶ್ರೀಮತಿ ಗಂಗಮ್ಮ ಬೇತೂರು ಸಿದ್ದಬಸಪ್ಪ & ಮಕ್ಕಳು ಶ್ರೀಮತಿ ನಾಗರತ್ನಮ್ಮ ಬೇತೂರು ಸಿದ್ದಬಸಪ್ಪ & ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 10.09.2024ನೇ ಮಂಗಳವಾರ ಬೆ. 3.20ಕ್ಕೆ ನಮ್ಮ ಪೂಜ್ಯ ಪತಿಯವರಾದ

**ಶರಣ ಬೇತೂರು ಸಿದ್ದಬಸಪ್ಪನವರು**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆ ಹಾಗೂ ನುಡಿ ನಮನ ಕಾರ್ಯಕ್ರಮವನ್ನು**

ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1108 **ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ** ದಿವ್ಯ ಸಾನಿಧ್ಯದಲ್ಲಿ ದಿನಾಂಕ : 18.09.2024ನೇ ಬುಧವಾರ ಬೆಳಿಗ್ಗೆ 11.00ಕ್ಕೆ ಆನೆಕೊಂಡದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಿಯಿಸಿರುವುದರಿಂದ ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಶಾಂತಿಗಾಗಿ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತ ಕುಟುಂಬ ವರ್ಗದವರು :**

ಸಹೋದರ : ಲಿಂ॥ ಬೇತೂರು ಚನ್ನಬಸಪ್ಪ ಮತ್ತು ಲಿಂ॥ ಶ್ರೀಮತಿ ವನಜ ಇವರ ಮಕ್ಕಳಾದ ಶ್ರೀಮತಿ ಗಿರಿಜಾ, ಶ್ರೀಮತಿ ಶಾರದ, ಶ್ರೀಮತಿನೀಲಾ ಕುಟುಂಬ ವರ್ಗ ಮತ್ತು ಮಕ್ಕಳು, ಮೊಮ್ಮಕ್ಕಳು, ಜರ್ಮನಿ.

ಪುತ್ರರು : ಶ್ರೀಮತಿ ಗೀತಮ್ಮ, ಶ್ರೀ ಬಿ.ಎಸ್. ಬಸವರಾಜಪ್ಪ ಮತ್ತು ಮಕ್ಕಳು, ಶ್ರೀಮತಿ ಗಂಗಮ್ಮ, ಶ್ರೀ ಬಿ.ಎಸ್. ಪರಮೇಶ್ವರಪ್ಪ ಮತ್ತು ಮಕ್ಕಳು, ಶ್ರೀಮತಿ ಮಧು, ಶ್ರೀ ಬಿ.ಎಸ್. ಬಸವೇಶ್, ಆನೆಕೊಂಡ.

ಪುತ್ರಿಯರು : ಶ್ರೀಮತಿ ಸುಲೋಚನ, ಡಾ॥ ಎ.ಜಿ. ಉಮಾಕಾಂತ್, ದಾವಣಗೆರೆ., ಶ್ರೀಮತಿ ಶಶಿಕಲಾ, ಶ್ರೀ ಮಾಗನೂರು ಪ್ರದೀಪ್ ದಾವಣಗೆರೆ., ಶ್ರೀಮತಿ ಉಜ್ವಲ, ಡಾ॥ ಚನ್ನಬಸವ ಪಾಟೀಲ್, ಬೆಂಗಳೂರು. ಶ್ರೀಮತಿ ಸುಮಲತ, ಶ್ರೀ ಸಿದ್ಧಲಿಂಗ ತೇಜಸ್ವಿ, ಬೀರೂರು., ಶ್ರೀಮತಿ ಸುಲೋಚನ ಮಾಗನೂರು ರಾಜಶೇಖರ್, ದಾವಣಗೆರೆ., ಶ್ರೀಮತಿ ಪುಷ್ಪ ಮತ್ತು ಶ್ರೀ ಕೆ.ಬಿ.ಮಲ್ಲಿಕಾರ್ಜುನ್, EX MLA, ಬೀರೂರು

ಮೊಮ್ಮಕ್ಕಳು, ಮರಿಮಕ್ಕಳು ಎಲಿಗಾರ್ ವಂಶಸ್ಥರು, ಆನೆಕೊಂಡ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ಫೋ. : 99806 75771, 7975930747 99864 29990, ವಿ.ಸೂ. : ಪೂಜ್ಯ ಶ್ರೀಗಳ ಆಗಮನ ಬೆಳಿಗ್ಗೆ 11 ಗಂಟೆಗೆ

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ತಪ್ಪದೇ ಆಗಮಿಸಬೇಕಾಗಿ ಕೋರಿದೆ.

## ಕಡ್ಲೇಬಾಳು ಗುರುಕಣ್ಣರ ಪಾರ್ವತಮ್ಮ ನಿಧನ



ದಾವಣಗೆರೆ ತಾಲ್ಲೂಕು ಕಡ್ಲೇಬಾಳು ಗ್ರಾಮದ ವಾಸಿ ದಿ. ಗುರುಕಣ್ಣರ ರೇವಣಸಿದ್ದಪ್ಪನವರ ಧರ್ಮಪತ್ನಿ

**ಶ್ರೀಮತಿ ಗುರುಕಣ್ಣರ ಪಾರ್ವತಮ್ಮನವರು**

ದಿನಾಂಕ 16.09.2024ರ ಸೋಮವಾರ ಬೆಳಿಗ್ಗೆ 10.55ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 70 ವರ್ಷ ವಯಸ್ಸಾಗಿತ್ತು.

ಆರು ಜನ ಪುತ್ರರು ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.09.2024ರ ಮಂಗಳವಾರ ಬೆಳಿಗ್ಗೆ 12.30ಕ್ಕೆ ಕಡ್ಲೇಬಾಳು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

ಮೊ. 91106 29359, 82176 56294

## ಕಬ್ಬೂರು ದಿ. ಕೆ.ಜಿ. ಬಸವರಾಜಪ್ಪನವರ ಧರ್ಮಪತ್ನಿ ಶ್ರೀಮತಿ ಪಾರ್ವತಮ್ಮ ನಿಧನ



ದಾವಣಗೆರೆ ಸಿಟಿ ಕೆ.ಬಿ. ಬಡಾವಣೆ, ಕಿರುವಾಡಿ ಲೇಔಟ್ ವಾಸಿ

**ಶ್ರೀಮತಿ ಪಾರ್ವತಮ್ಮನವರು**

ದಿನಾಂಕ 16.9.2024ರ ಸೋಮವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ : 17.9.2024ರ ಮಂಗಳವಾರ ಬೆಳಿಗ್ಗೆ 10 ಗಂಟೆಯವರೆಗೆ ದಾವಣಗೆರೆ ಕಿರುವಾಡಿ ಲೇಔಟ್‌ನ ಮೃತರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕಿಡಲಾಗುವುದು. ತದನಂತರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆಯನ್ನು ದಾವಣಗೆರೆ ತಾಲ್ಲೂಕು ಕಬ್ಬೂರು ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಅಳಿಯಂದಿರು, ಮೊಮ್ಮಕ್ಕಳು, ಸೊಸೆಯಂದಿರು, ಕಬ್ಬೂರು ಗ್ರಾಮಸ್ಥರು. ಮೊ. 94496-74899

# ನಗರ ಮತ್ತೆ ವೃತ್ತಿ ರಂಗಭೂಮಿಯ ತವರಾಗುತ್ತಿದೆ

## ವೃತ್ತಿ ರಂಗಭೂಮಿ ರಂಗಾಯಣ ಕಾರ್ಯಕ್ರಮದಲ್ಲಿ ಸಂಸದೆ ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಸೆ. 16 - ಕಳೆದ ಎರಡು ವರ್ಷಗಳಲ್ಲಿ ದಾವಣಗೆರೆಯಲ್ಲಿ ಮತ್ತೆ ವೃತ್ತಿ ರಂಗಭೂಮಿಯ ಚಟುವಟಿಕೆಗಳು ಹೆಚ್ಚಾಗುತ್ತಿವೆ. ನಗರ ಮತ್ತೆ ವೃತ್ತಿ ರಂಗಭೂಮಿಯ ತವರಾಗುವತ್ತ ಹೆಜ್ಜೆ ಹಾಕುತ್ತಿದೆ ಎಂದು ಸಂಸದೆ ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ನಗರದ ಜೆ.ಜೆ.ಎಂ. ವೈದ್ಯಕೀಯ ಕಾಲೇಜು ಆವರಣದಲ್ಲಿರುವ ಬಾಪೂಜಿ ಸಭಾಂಗಣದಲ್ಲಿ ನಿನ್ನೆ ಆಯೋಜಿಸಲಾಗಿದ್ದ ವೃತ್ತಿ ರಂಗಭೂಮಿ ರಂಗಾಯಣ ದಾವಣಗೆರೆಯ 2024-25ನೇ ಸಾಲಿನ ರಂಗ ಚಟುವಟಿಕೆಗಳ ನಾಂದಿ - ಆರಂಭೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ರಂಗಭೂಮಿಗೆ 4 ಕೋಟಿ ರೂ.ಗಳ ಅನುದಾನ ನೀಡಲು ಈಗಾಗಲೇ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ನಾನೂ ಸಹ ಸಂಸದರ ಅನುದಾನದ ಮೂಲಕ ನೆರವು ನೀಡುತ್ತೇನೆ ಎಂದರು.

ಕಳೆದ ಎರಡು ವರ್ಷಗಳಲ್ಲಿ ರಂಗ ಚಟುವಟಿಕೆ ಹಾಗೂ ಕಲಾ ಚಟುವಟಿಕೆಗಳಿಗೆ ಉತ್ತೇಜನಗಳನ್ನು ನೀಡಲಾಗುತ್ತಿದೆ. ಬಾಪೂಜಿ ವಿದ್ಯಾಸಂಸ್ಥೆಯ ಬಿ.ಐ.ಇ.ಟಿ.ಯಲ್ಲೂ ನಾಟಕಗಳ ಪ್ರದರ್ಶನವಾಗಿದೆ. ಇದೇ ವೇದಿಕೆಯಲ್ಲಿ ಮಕ್ಕಳ ರಾಮಾಯಣ ನಾಟಕ ಪ್ರದರ್ಶನವಾಗಿತ್ತು ಎಂದು ಹೇಳಿದರು.

ಕೊಂಡಜ್ಜಿಯಲ್ಲಿ ವೃತ್ತಿ ರಂಗಭೂಮಿ ರಂಗಾಯಣಕ್ಕೆ ನೀಡಲಾಗಿರುವ 10 ಎಕರೆ ಜಾಗವನ್ನು ಅಭಿವೃದ್ಧಿ ಪಡಿಸಲು ನೆರವು ನೀಡಲಾಗುವುದು ಎಂದು ಪ್ರಭಾ ಹೇಳಿದರು.

ನಾನೂ ಸಹ ಕಾಲೇಜು ದಿನಗಳಲ್ಲಿ ನೃತ್ಯ - ನಾಟಕ ಪ್ರದರ್ಶನದಲ್ಲಿ ಭಾಗವಹಿಸಿದ್ದೆ. ಕಲೆ, ಗಾಯನ, ನೃತ್ಯ ಹಾಗೂ ರಂಗಭೂಮಿ ಚಟುವಟಿಕೆಗಳಲ್ಲಿ ಮಕ್ಕಳು ತೊಡಗಿಕೊಳ್ಳುವುದರಿಂದ ಅವರ ಸರ್ವಾಂಗೀಣ ಬೆಳವಣಿಗೆಗೆ ನೆರವಾಗುತ್ತದೆ ಎಂದು ತಿಳಿಸಿದರು.

ಸಂಗೀತ ನಿರ್ದೇಶಕ ಹಂಸಲೇಖ ಮಾತನಾಡಿ, ನಾನು ಹವ್ಯಾಸಿ ಹಾಗೂ ವೃತ್ತಿ ರಂಗಭೂಮಿಯ ಎರಡೂ ಗುಣಗಳನ್ನು ಹೊಂದಿರುವ ವಿವೇಕ ರಂಗ ವೇದಿಕೆ ರಚಿಸಿದ್ದೆ. ಆ ಮೂಲಕ ರಾಜ್ಯದಾದ್ಯಂತ ಕಾರ್ಯಕ್ರಮಗಳನ್ನು ಪ್ರದರ್ಶಿಸಿದ್ದೇನೆ ಎಂದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ವೃತ್ತಿ ರಂಗಭೂಮಿ ಕಲಾವಿದರಿಗೆ 20 ಸಾವಿರ ರೂ.ಗಳ ಮಸಾಶನ ಸಿಗುವಂತಾಗಬೇಕು. ಇದಕ್ಕಾಗಿ ಸರ್ಕಾರವನ್ನು ಒತ್ತಾಯಿಸುವುದಾಗಿ ಹೇಳಿದರು.

ಧಾರವಾಡದ ರಂಗಾಯಣದ ನಿರ್ದೇಶಕ ರಾಜು ತಾಳಿಕೋಟೆ ಮಾತನಾಡಿ, ದಾವಣಗೆರೆಯ ವೃತ್ತಿ ರಂಗಭೂಮಿ ರಂಗಾಯಣದ ಮೂಲಕ ವರ್ಷಕ್ಕೆ ಕನಿಷ್ಠ 25 ಕಲಾವಿದರಿಗೆ ತರಬೇತಿ ನೀಡಬೇಕು ಎಂದು ಆಶಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ದಾವಣಗೆರೆ ವೃತ್ತಿ ರಂಗಭೂಮಿ ರಂಗಾಯಣದ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ, ಕೊಂಡಜ್ಜಿಯಲ್ಲಿರುವ ರಂಗಾಯಣದ 10 ಎಕರೆ ಜಾಗದಲ್ಲಿ ಸಂಗೀತ, ನೃತ್ಯ ಸೇರಿದಂತೆ ವೃತ್ತಿರಂಗಭೂಮಿಯ ಎಲ್ಲಾ ವಿಭಾಗಗಳನ್ನು ಆರಂಭಿಸುವ ಉದ್ದೇಶವಿದೆ. ಇದಕ್ಕೆ ಸಹಕಾರ ಬೇಕಿದೆ ಎಂದರು.

ಸಾಣೇಹಳ್ಳಿ ಪೀಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ವೇದಿಕೆಯ ಮೇಲೆ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ರಂಗ ಕರ್ಮಿಗಳಾದ ಚಿಂದೋಡಿ ಶ್ರೀಕಂಠೇಶ್, ಶಶಿಧರ ಬಾರಿಘಾಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಉಪಸ್ಥಿತರಿದ್ದರು. ಡಾ. ಅನುರಾಧ ಬಕ್ಕಪ್ಪ ನಿರೂಪಿಸಿದರು.

# ಕಂಪನಿ ನಾಟಕಗಳ ಹಾವಳಿ : ರಂಗ, ಕಲೆ ಕಣ್ಮರೆ



**ಹರಪನಹಳ್ಳಿಯ ಕಾರ್ಯಕ್ರಮದಲ್ಲಿ ಯಕ್ಷಗಾನ ಅಕಾಡೆಮಿ ಸದಸ್ಯ ಎ.ಆರ್. ಪುಟ್ಟಸ್ವಾಮಿ ವಿಷಾದ**

ಹರಪನಹಳ್ಳಿ, ಸೆ. 16 - ಕಂಪನಿ ನಾಟಕಗಳ ಹಾವಳಿಯಿಂದ ಮೂಡಲಪಾಯ ಯಕ್ಷಗಾನದಂತಹ ರಂಗ ಕಲೆಗಳು ಕಣ್ಮರೆಯಾಗುತ್ತಿವೆ ಎಂದು ಯಕ್ಷಗಾನ ಅಕಾಡೆಮಿ ಸದಸ್ಯ ಎ.ಆರ್. ಪುಟ್ಟಸ್ವಾಮಿ ವಿಷಾದ ವ್ಯಕ್ತ ಪಡಿಸಿದರು.

ಪಟ್ಟಣದ ಎಚ್‌ಪಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ಯಕ್ಷಗಾನ ಅಕಾಡಮಿ ಹಾಗೂ ನೈಪುಣ್ಯ ಟ್ರಸ್ಟ್ ಸಹಯೋಗ ದೊಂದಿಗೆ ಮೂಡಲಪಾಯ ಯಕ್ಷ ಗಾನ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕತೆ ಭರಾಟೆಯಲ್ಲಿ ಮುಳುಗಿರುವ ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ಬರೀ ಪಠ್ಯದ ಜ್ಞಾನವನ್ನು ಮಾತ್ರ ನೀಡದೆ ಸಂಗೀತ, ನೃತ್ಯ, ನಾಟಕದಂತಹ ಕಲೆಗಳ ಅರಿವನ್ನು ಮೂಡಿಸಬೇಕು ಎಂದರು.

ಬಯಲಾಟ ಆಕಾಡೆಮೆ ಸದಸ್ಯ ಯಕ್ಷಗಾನ ಅಕಾಡೆಮಿ ಗೌರವ ಪ್ರಶಸ್ತಿ ಪುರಸ್ಕೃತ ಬಿ. ಪರುಶುರಾಮ ಮಾತನಾಡಿ, ಸಮಾಜವನ್ನು ಸುಂದರವಾಗಿ ರೂಪಿಸಲು ವಿದ್ಯಾರ್ಥಿಗಳ ಪಾತ್ರ ಬಹುಮುಖ್ಯವಾಗಿದ್ದು ಕಲೆ, ಸಾಹಿತ್ಯ, ಸಂಸ್ಕೃತಿ, ರಂಗ ಕಲೆಗಳನ್ನು ಕಲಿತುಕೊಳ್ಳುವ ಅನಿವಾರ್ಯತೆ ಇದೆ. ಅಕ್ಷರ ಶಿಕ್ಷಣಕ್ಕಿಂತ ದೃಶ್ಯ ಮಾಧ್ಯಮ ಶಿಕ್ಷಣ ಶ್ರೇಷ್ಠವಾಗಿದ್ದು ವಲಸೆ ಕಲೆಗೆ ಪ್ರೋತ್ಸಾಹ ನೀಡುವ ಬದಲು ದೇಶಿಯ ಕಲೆಗೆ ಆದ್ಯತೆ ನೀಡಬೇಕಿದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ಹಾಗೂ ವರದಿಗಾರ ಎ. ನಾಗೇಂದ್ರಪ್ಪ ಮಾತನಾಡಿ, ಸಾಹಿತ್ಯ, ಸಂಗೀತ, ನೃತ್ಯದೊಂದಿಗೆ ಸಂಯೋಜಿತಗೊಂಡಿರುವ ವಿಶಿಷ್ಟ ಜನಪದ ಕಲೆ ಮೂಡಲಪಾಯ ಯಕ್ಷಗಾನ ಇಂದು ವಿನಾಶದ ಅಂಚು ತಲು ಪಿದೆ. ಮೂಡಲಪಾಯಕ್ಕೆ ಅವಿಭಾಜ್ಯ ಅಂಗ ವಾಗಿದ್ದ ಮುಖವೀಣೆ, ಮದ್ದಳೆ, ಭಾಗವತಿಕೆ ಈಗ ಪಳೆಯುಳಿಕೆ ಸ್ಥಿತಿಯಲ್ಲಿದ್ದು ವೃತ್ತಿಪರ ಯಕ್ಷಗಾನ, ಮೇಳ, ಪಾತ್ರಧಾರಿಗಳು, ಭಾಗ ವತರು, ಹಿಮ್ಮೇಳ ಕಲಾವಿದರು ಪಡುವಲ ಪಾಯ ಪ್ರಕಾರವನ್ನು ತೊರೆಯುತ್ತಿದ್ದಾರೆ. ಪಡುವಲಪಾಯಕ್ಕೆ ವಿದ್ಯಾವಂತರು ಪ್ರವೇಶಿಸು ತ್ತಿರುವ ಕಾರಣ ಅದು ಆ ಭಾಗದ ಅಸ್ಮಿತೆಯ ರೂಪ ಪಡೆದುಕೊಂಡಿದೆ. ಪಡುವಲಪಾಯ ದಷ್ಟೇ ಪ್ರಾಚೀನ, ಪೌರಾಣಿಕ ಹಿನ್ನೆಲೆ ಹೊಂದಿರುವ ಮೂಡಲಪಾಯ ಯಕ್ಷಗಾನಕ್ಕೆ ವಿದ್ಯಾವಂತರು ಪದಾರ್ಪಣೆ ಮಾಡುತ್ತಿಲ್ಲ. ಹೀಗಾಗಿ ಅದು ಅಳಿಯುತ್ತಿದೆ ಎಂದರು.

ನೈಪುಣ್ಯ ಟ್ರಸ್ಟ್‌ನ ಸಂಸ್ಥಾಪಕ ಆನಂದ ಕರುವಿನ ಮಾತನಾಡಿ, ಮೂಡಲಪಾಯ ಯಕ್ಷಗಾನದ ಒರಟು ಹೆಜ್ಜೆಗಳನ್ನು ಮಕ್ಕಳಿಗೆ ಕಲಿಸುವುದು ಅಷ್ಟು ಸುಲಭದ ಮಾತಲ್ಲ. ಹೀಗಾಗಿ ಮೂಡಲಪಾಯದ ಮೂಲಕ್ಕೆ ಧಕ್ಕೆ ಯಾಗದಂತೆ ಹೆಜ್ಜೆಗಳ ಪರಿಷ್ಕರಣೆ ಮಾಡಲಾ ಗಿದ್ದು, ಅದಕ್ಕೆ ಆಧುನಿಕ ರಂಗಭೂಮಿ ನಿರ್ದೇ ಶಕರ ಸಹಾಯ ಪಡೆಯಲಾಗಿದೆ ಎಂದರು.

ಉಪನ್ಯಾಸಕ ರವೀಂದ್ರ ಬಿ.ಕೆ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಯಕ್ಷಗಾನ ಆಕಾಡೆಮೆಯ ನಿವೃತ್ತ ರಿಜಿಸ್ಟರ್ ಜಿ.ಎಸ್. ಶಿವರುದ್ರಪ್ಪ, ಜೀವಜಲ ಟ್ರಷ್ಟ ಸಂಸ್ಥಾಪಕ ಹೇಮಣ್ಣ ಮೋರಗೇರಿ, ವರದಿಗಾರ ಎಸ್. ನಾಗಭೋಷಣ, ಉಪನ್ಯಾಸಕ ಅರುಣನಾಯ್ಕ ಮಾತನಾಡಿದರು. ವೇದಿಕೆಯ ಮೇಲೆ ಉಪನ್ಯಾಸಕ ಶಂಕರಪ್ಪ, ಮಂಜುನಾಥ್, ಮಾಳಗಿ ಸೇರಿದಂತೆ ಇತರರು ಇದ್ದರು.

## ಆಫ್ಘಾನಿಸ್ತಾನದಲ್ಲಿ ಪೋಲಿಯೋ ಲಸಿಕಾ ಅಭಿಯಾನಕ್ಕೆ ತಡೆ

ದುಬೈ, ಸೆ. 16 - ಆಫ್ಘಾನಿಸ್ತಾನದಲ್ಲಿ ಪೋಲಿಯೋ ವಿರುದ್ಧದ ಲಸಿಕಾ ಅಭಿಯಾನಕ್ಕೆ ತಾಲಿಬಾನ್ ತಡೆ ಹಾಕಿದೆ ಎಂದು ವಿಶ್ವ ಸಂಸ್ಥೆ ತಿಳಿಸಿದೆ. ಆಫ್ಘಾನಿಸ್ತಾನ ಹಾಗೂ ಪಾಕಿಸ್ತಾನಗಳಲ್ಲಿ ಪೋಲಿಯೋ ಅಪಾಯ ಹೆಚ್ಚಾಗಿದೆ. ಎರಡೂ ದೇಶಗಳಲ್ಲಿ ರೋಗ ಹರಡುವುದು ನಿಂತಿಲ್ಲ.

ಸೆಪ್ಟೆಂಬರ್‌ನಲ್ಲಿ ಪೋಲಿಯೋ ಲಸಿಕಾ ಅಭಿಯಾನ ಆರಂಭವಾಗಬೇಕಿತ್ತು. ಆದರೆ, ತಾಲಿಬಾನ್ ಸರ್ಕಾರ ಲಸಿಕಾ ಅಭಿಯಾನಕ್ಕೆ ತಡೆ ಹಾಕಿದೆ. ಇದಕ್ಕೆ ಯಾವುದೇ ಕಾರಣ ನೀಡಿಲ್ಲ.

ಮನೆ ಮನೆಗೆ ತೆರಳಿ ಲಸಿಕೆ ನೀಡುವ ಬದಲು, ಮಸೀದಿಗಳಂತಹ ಸ್ಥಳಗಳಲ್ಲಿ ಲಸಿಕೆ ನೀಡುವ ಕುರಿತು ಚರ್ಚೆಗಳು ನಡೆಯುತ್ತಿವೆ ಎಂದು ವಿಶ್ವ ಆರೋಗ್ಯ ಸಂಘಟನೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ವರ್ಷ ಆಫ್ಘಾನಿಸ್ತಾನದಲ್ಲಿ 18 ಪೋಲಿಯೋ ಪ್ರಕರಣಗಳು ಪತ್ತೆಯಾಗಿವೆ. ಇವುಗಳಲ್ಲಿ 16 ದೇಶದ ದಕ್ಷಿಣ ಭಾಗದಲ್ಲಿ ಕಂಡು ಬಂದಿವೆ. ಪಾಕಿಸ್ತಾನದಲ್ಲೂ ಸಹ ಲಸಿಕಾ ಅಭಿಯಾನಕ್ಕೆ ವಿರೋಧಗಳು ವ್ಯಕ್ತವಾಗಿದ್ದವು. ಲಸಿಕಾ ತಂಡಗಳ ಮೇಲೆ ಉಗ್ರರು ದಾಳಿ ನಡೆಸಿದ ಘಟನೆಗಳು ನಡೆದಿದ್ದವು.




## ಸಿದ್ದಗಂಗಾ ವಿದ್ಯಾರ್ಥಿಗಳಿಂದ ಅಕ್ಷರ ಸರಪಳಿ

ದಾವಣಗೆರೆ. ಸೆ.16- ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಜಿಲ್ಲಾಡಳಿತ ವತಿಯಿಂದ ಆಯೋಜಿಸಿದ್ದ ಬೃಹತ್ ಮಾನವ ಸರಪಳಿ ಕಾರ್ಯಕ್ರಮದಲ್ಲಿ ನಗರದ ಸಿದ್ದಗಂಗಾ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಾಲೆಯ 1250ಕ್ಕೂ ಅಧಿಕ ವಿದ್ಯಾರ್ಥಿಗಳು, ಹರಿಹರ ನಗರ ಗಾಂಧಿ ಮೈದಾನದಲ್ಲಿ ಅಕ್ಷರ ಸರಪಳಿ ಮೂಲಕ ಸಂವಿಧಾನ ಪೀಠಿಕೆಯ ಡೆಮಾಕ್ರಸಿ, ಸೋಶಿಯಲಿಸ್ಟಿಕ್, ಸೆಕ್ಯುಲರ್, ಡೆಮಾಕ್ರಟಿಕ್, ರಿಪಬ್ಲಿಕ್, ಜಸ್ಟಿಸ್, ಲಿಬರ್ಟಿ, ಈಕ್ವಾಲಿಟಿ, ಫೆಟರ್ನಿಟಿ ಎಂಬ ಪದ ರಚಿಸಿ ಎಲ್ಲರ ಗಮನ ಸೆಳೆದರು. ಈ ವೇಳೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ.ಪಿ ಹರೀಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು, ಶಾಲೆಯ ವಿದ್ಯಾರ್ಥಿಗಳಿದ್ದರು.

# ಕೊಕ್ಕನೂರು ಗ್ರಾಮದಲ್ಲಿ ಟ್ರ್ಯಾಕ್ಟರ್ ಓಡಿಸುವ ಸ್ಪರ್ಧೆ



ಮಲೇಬೆನ್ನೂರು, ಸೆ.16- ಕೊಕ್ಕನೂರು ಗ್ರಾಮದಲ್ಲಿ ಭಗತ್‌ಸಿಂಗ್ ಯೂಥ್‌ಫೋರ್ಸ್ ಇವರು ಪ್ರತಿಷ್ಠಾಪಿಸಿರುವ ಗಣಪತಿ ಉತ್ಸವದ ಅಂಗವಾಗಿ ಗುರುವಾರ ಹಮ್ಮಿಕೊಂಡಿದ್ದ ಟಯರ್ ನಡುವಿನ ಅಂತರದಲ್ಲಿ ಟ್ರ್ಯಾಕ್ಟರ್ ಓಡಿಸುವ ಸ್ಪರ್ಧೆಯಲ್ಲಿ ಭಾನುವಳ್ಳಿ ಪ್ರವೀಣ್ ಇವರು ಪ್ರಥಮ ಬಹುಮಾನ ಪಡೆದರು. ಕೊಕ್ಕನೂರಿನ ರೇವಣಸಿದ್ದ ಅವರಿಗೆ ದ್ವಿತೀಯ ಬಹುಮಾನ ಲಭಿಸಿತು. ಪ್ರಥಮ ಬಹುಮಾನ 10 ಸಾವಿರ ರೂ. ಮತ್ತು ದ್ವಿತೀಯ ಬಹುಮಾನ 5 ಸಾವಿರ ರೂ.ಗಳಾಗಿತ್ತು.

# ಮಕ್ಕಳಿಗೆ ಗ್ರಾಮೀಣ ಕ್ರೀಡೆ, ಕಲೆ, ಸಾಹಿತ್ಯವನ್ನೂ ಕಲಿಸಿ

## ಜಿಗಳಿ : ಪ್ರತಿಭಾ ಕಾರಂಜಿ ಉದ್ಘಾಟನೆಯಲ್ಲಿ ಪೋಷಕರಿಗೆ ಹೆಚ್.ಚಂದ್ರಪ್ಪ ಮನವಿ



ಮಲೇಬೆನ್ನೂರು, ಸೆ.16- ಪೋಷಕರು ಮಕ್ಕಳಿಗೆ ಗ್ರಾಮೀಣ ಕ್ರೀಡೆ, ಕಲೆ, ಸಾಹಿತ್ಯವನ್ನು ಪರಿಚಯಿಸಿ, ಅವುಗಳನ್ನೂ ಕಲಿಯಲು ಅವರಿಗೆ ಪ್ರೋತ್ಸಾಹ ನೀಡಬೇಕೆಂದು ಹರಿಹರ ತಾ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಹೆಚ್. ಚಂದ್ರಪ್ಪ ಹೇಳಿದರು.

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕುಂಬಳೂರು ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಪೋಷಕರು ತಮ್ಮ ಮಕ್ಕಳಿಗೆ ಕ್ರಿಕೆಟ್ ಆಟದ ಬಗ್ಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದಾರೆ. ಕ್ರಿಕೆಟ್ ಜೊತೆಗೆ ಗ್ರಾಮೀಣ ಕ್ರೀಡೆಗಳಿಗೂ ಒತ್ತು ನೀಡಬೇಕು. ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಲು ಶಿಕ್ಷಕರೂ ಕ್ರಿಯಾಶೀಲರಾಗಬೇಕೆಂದು ಅವರು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಿಆರ್‌ಪಿ ಕೆ.ಜಿ.ನಂಜುಂಡಪ್ಪ ಅವರು, ಮಕ್ಕಳ ಸರ್ವತೋಮುಖ ಬೆಳವಣಿಗೆಯ ಉದ್ದೇಶದಿಂದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಮಾಡುತ್ತಿದ್ದು, ಮಕ್ಕಳನ್ನು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕವಾಗಿಯೂ ಬೆಳೆಸುವ ಕೆಲಸ ಈ ಕಾರ್ಯಕ್ರಮದಲ್ಲಿ ಆಗಲಿದೆ ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಎನ್. ನಾಗರಾಜ್, ನಿವೃತ್ತ ಶಿಕ್ಷಕ ಜಿ.ನಾಗೇಶ್, ತಾ. ಶಿಕ್ಷಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ರಾಮನಗೌಡ ಪ್ಯಾಟಿ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರಚಾರಿ ಅಧ್ಯಕ್ಷತೆ ವಹಿಸಿದ್ದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ರೂಪಾ ಸೋಮಶೇಖರ್, ಉಪಾಧ್ಯಕ್ಷ ಡಿ.ಎಂ.ಹರೀಶ್, ಗ್ರಾ.ಪಂ. ಸದಸ್ಯರಾದ ಕೆ.ಜಿ.ಬಸವರಾಜ್, ಎಕ್ಕೆಗೊಂದಿ ಚೇತನ್‌ಕುಮಾರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಎಂ.ದೇವೇಂದ್ರಪ್ಪ, ಎನ್‌ಪಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣನವರ್, ಗ್ರಾಮದ ಮುಖಂಡರಾದ ಬಿ.ಸೋಮ ಶೇಖರಚಾರಿ, ನಾಗಸನಹಳ್ಳಿ ಮಹೇಶ್ವರಪ್ಪ, ಡಿ.ಆರ್.ಮಧು, ಜಿ.ಪಿ.ಹನುಮಗೌಡ, ಎಕ್ಕೆಗೊಂದಿ ರುದ್ರಗೌಡ, ಸಿ.ಎನ್.ಪರಮೇಶ್ವರಪ್ಪ, ಬನ್ನಿಕೋಡು ನಾಗರಾಜಪ್ಪ, ಪಿಎಸಿಎಸ್ ಸಿಇಓ ಎನ್.ಎನ್. ತಳವಾರ್, ಜಿ.ಆರ್.ಚಂದ್ರಪ್ಪ, ಟಿ.ಎಸ್.ಗದಿಗೇಶ್, ಎಂ.ಆರ್. ನಾಗರಾಜ್, ಟಿ.ನಾಗರಾಜ್, ವಿಜಯಭಾಸ್ಕರ್, ಎಸ್‌ಡಿಎಂಸಿ ಉಪಾಧ್ಯಕ್ಷೆ ಮಂಜುಳಾ ಮಾಲತೇಶ್, ಪತ್ರಕರ್ತ ಪ್ರಕಾಶ್, ಎಲ್‌ಕೆಜಿ, ಯುಕೆಜಿ ಅಧ್ಯಕ್ಷ ಕೆ.ಎಸ್.ಮಾಲತೇಶ್, ನಿವೃತ್ತ ಶಿಕ್ಷಕರಾದ ಡಿ. ರವೀಂದ್ರಪ್ಪ, ಜಿ.ಆರ್.ನಾಗರಾಜ್, ಕಮಲಾಪುರದ ಕರಿಬಸಪ್ಪ, ಬಿ.ರವೀಂದ್ರಚಾರಿ, ಮಲೇಬೆನ್ನೂರು ಆಶ್ರಯ ಕಾಲೋನಿ ಶಾಲೆಯ ಮುಖ್ಯ ಶಿಕ್ಷಕಿ ಸುಧಾ, ತಾ. ಅನುದಾನಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಟಿ.ಮಂಜಪ್ಪ, ಅನುದಾನಿತ ಶಾಲಾ ಶಿಕ್ಷಕರ ಒಕ್ಕೂಟದ ಅಧ್ಯಕ್ಷ ಕೆ.ಭೀಮಪ್ಪ, ಶಿಕ್ಷಕ ಪತ್ತಿನ ಸಹಕಾರ ಸಂಘದ ನಿರ್ದೇಶಕ ಶಶಿಕುಮಾರ್, ಚಿಟ್ಟಕ್ಕಿ ಶಾಲೆಯ ಶಿಕ್ಷಕ ವೀರಭದ್ರಚಾರ್, ಬೆಣ್ಣೆಹಳ್ಳಿ ಬಸವರಾಜ್ ಸೇರಿದಂತೆ ಇನ್ನೂ ಅನೇಕರು ವೇದಿಕೆಯಲ್ಲಿದ್ದರು.

ಜಿಗಳಿ ಶಾಲೆಯ ಪ್ರಭಾರಿ ಮುಖ್ಯ ಶಿಕ್ಷಕ ಲಿಂಗರಾಜ್ ಸ್ವಾಗತಿಸಿದರು. ದೈಹಿಕ ಶಿಕ್ಷಕ ಶ್ರೀನಿವಾಸ್ ರೆಡ್ಡಿ, ಶಿಕ್ಷಕ ಗುಡ್ಡಪ್ಪ ನಿರೂಪಿಸಿದರು. ಶಿಕ್ಷಕ ಮಲ್ಲಿಕಾರ್ಜುನ್ ವಂದಿಸಿದರು.

## ಕಾಂಗ್ರೆಸ್‌ಗೆ ನಾಲ್ಕು ಸಂಸದೀಯ ಸಮಿತಿಗಳ ಅಧ್ಯಕ್ಷತೆ ಸ್ಥಾನ

ನವದೆಹಲಿ, ಸೆ. 16 - ಕಾಂಗ್ರೆಸ್ ಪಕ್ಷಕ್ಕೆ ಲೋಕಸಭೆಯಲ್ಲಿ ವಿದೇಶಾಂಗ ವ್ಯವಹಾರ, ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ರಾಜ್ಯಸಭೆಯಲ್ಲಿ ಶಿಕ್ಷಣ ವಿಷಯಗಳಿಗೆ ಸಂಬಂಧಿಸಿದ ಸಂಸದೀಯ ಸಮಿತಿಯ ಅಧ್ಯಕ್ಷ ಸ್ಥಾನ ಸಿಗಲಿದೆ.

ಸರ್ಕಾರ ಹಾಗೂ ಪ್ರತಿಪಕ್ಷಗಳ ನಡುವೆ ಅಧ್ಯಕ್ಷ ಸ್ಥಾನಗಳಿಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಲೋಕಸಭೆಯಲ್ಲಿ ಮೂರು ಹಾಗೂ ರಾಜ್ಯಸಭೆಯಲ್ಲಿ ಒಂದು ಸ್ಥಾಯಿ ಸಮಿತಿಯ ಅಧ್ಯಕ್ಷ ಸ್ಥಾನ ಕಾಂಗ್ರೆಸ್ ಪಕ್ಷ ಪಡೆದುಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

ಲೋಕಸಭೆಯಲ್ಲಿ ವಿದೇಶಾಂಗ ವ್ಯವಹಾರ, ಕೃಷಿ, ಪಶುಸಂಗೋಪನೆ ಮತ್ತು ಆಹಾರ ಸಂಸ್ಕರಣೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಷಯಗಳಿಗೆ ಸಂಬಂಧಿಸಿದ ಅಧ್ಯಕ್ಷ ಸ್ಥಾನವನ್ನು ಕಾಂಗ್ರೆಸ್ ಪಡೆಯಲಿದೆ.

ರಾಜ್ಯಸಭೆಯಲ್ಲಿ ಶಿಕ್ಷಣ, ಮಹಿಳೆ, ಮಕ್ಕಳು, ಯುವಕರು ಹಾಗೂ ಕ್ರೀಡೆಗಳಿಗೆ ಸಂಬಂಧಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ಕಾಂಗ್ರೆಸ್ ಪಡೆಯಲಿದೆ.

ಕಾಂಗ್ರೆಸ್ ಪಕ್ಷ ಐದು ವರ್ಷಗಳ ನಂತರ ವಿದೇಶಾಂಗ ವ್ಯವಹಾರಗಳ ಸಮಿತಿ ಅಧ್ಯಕ್ಷ ಸ್ಥಾನ ಪಡೆಯಲಿದೆ. ಈ ಹಿಂದೆ 2014 ರಿಂದ 2019ರ ನಡುವೆ ಕಾಂಗ್ರೆಸ್ ಹಿರಿಯ ನಾಯಕ ಶಶಿ ಥರೂರ್ ಅವರು ವಿದೇಶಾಂಗ ವ್ಯವಹಾರಗಳ ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದರು.

# ಹರಿಹರದಲ್ಲಿ ಈದ್ ಮಿಲಾದ್ ಆಚರಣೆ




ಹರಿಹರ, ಸೆ.16- ನಗರದಲ್ಲಿ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಸಮುದಾಯದವರು ಶ್ರದ್ಧಾ ಭಕ್ತಿಯಿಂದ ಆಚರಣೆ ಮಾಡಿದರು.

ನಗರದ ಹಳ್ಳದಕೇರಿ ನಾಲಮೊಲ್ಲಾ ದರ್ಗಾದ ಆವರಣದಲ್ಲಿ ಅಲ್ಲಾ ದೇವರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸುವುದರ ಮೂಲಕ ಈದ್ ಮಿಲಾದ್ ಹಬ್ಬದ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಹೈಸ್ಕೂಲ್ ಬಡಾವಣೆಯ ಮಸೀದಿಗೆ ಆಗಮಿಸುತ್ತಿದಂತೆ ಮಸೀದಿಯಲ್ಲಿ ಮೌಲಾನ ಶಂಶುದ್ದಿನ್ ಸಾಬ್ ಬರಕಾತಿ ಯವರ ನೇತೃತ್ವದಲ್ಲಿ ಪ್ರಾರ್ಥನೆ ಸಲ್ಲಿಸಿ ನಿನ್ನೆ ನಡೆದ ಪ್ರಜಾಪ್ರಭುತ್ವ ದಿನಾಚರಣೆ ಪ್ರಯುಕ್ತ ಮಸೀದಿ ಆವರಣದಲ್ಲಿ ಸಂವಿಧಾನ ಪೀಠಿಕೆಯನ್ನು ಓದಿ ನಂತರಮೆರವಣಿಗೆಯನ್ನುಮುಂದುವರೆಸಲಾಯಿತು.

ಈ ಸಂದರ್ಭದಲ್ಲಿ ಮೌಲಾನ ಶಂಶುದ್ದಿನ್ ಸಾಬ್ ಬರಕಾತಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಎಸ್.ರಾಮಪ್ಪ, ಕಾಂಗ್ರೆಸ್ ಪಕ್ಷದ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ನಗರ ಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ಅಂಜುಮಾನ್ ಇಸ್ಲಾಮಿಯಾ ಸಂಸ್ಥೆಯ ಅಧ್ಯಕ್ಷ ಏಜಾಜ್ ಆಹ್ಮದ್, ಸದಸ್ಯರಾದ ಆರ್.ಸಿ. ಜಾವೇದ್, ಬಿ.ಅಲ್ತಾಫ್, ಮುಜಾಮಿಲ್ ಬಿಲ್ಲು, ಬಾಬುಲಾಲ್, ಮಾಜಿ ಸದಸ್ಯರಾದ ಬಿ.ಕೆ. ಸೈಯದ್ ರೆಹಮಾನ್, ಸಿಗ್ಬತ್ ಉಲ್ಲಾ, ಹಾಲಿ ಕಾಂಗ್ರೆಸ್ ಪಕ್ಷದ ಮುಖಂಡ ಸಿ.ಎನ್. ಹುಲಗೇಶ್ ಇತರರು ಹಾಜರಿದ್ದರು.

## ರಾಣೇಬೆನ್ನೂರು- ಸೊಲ್ಲಾಪುರ ಬಸ್‌ಗೆ ಚಾಲನೆ



ರಾಣೇಬೆನ್ನೂರು, ಸೆ.16- ಪ್ರತಿದಿನ ರಾಣೇಬೆನ್ನೂರಿನಿಂದ ಸೊಲ್ಲಾಪುರಕ್ಕೆ ತೆರಳುವ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ರಾಜಹಂಸ ಬಸ್‌ಗೆ ಶಾಸಕ ಪ್ರಕಾಶ ಕೋಳಿವಾಡ ಅವರು ಇಂದು ಚಾಲನೆ ನೀಡಿದರು.

# ಬ್ಯಾಂಕ್ ಅಲಕ್ಷ್ಯ : ಟಿಡಿಎಸ್ ಹಣ, ದಂಡ ಪಾವತಿಸಲು ಗ್ರಾಹಕರ ಆಯೋಗದ ಆದೇಶ

ದಾವಣಗೆರೆ, ಸೆ. 16 - ಪ್ಯಾನ್ ಕಾರ್ಡ್ ಮಾಹಿತಿ ಪಡೆಯುವಲ್ಲಿ ಬ್ಯಾಂಕ್ ಅಲಕ್ಷ್ಯ ತೋರಿರುವ ಕಾರಣ ಗ್ರಾಹಕನಿಗೆ ಆಗಿರುವ ನಷ್ಟಕ್ಕೆ ಪರಿಹಾರ ಹಾಗೂ ವ್ಯತ್ಯಾಸದ ಹಣ ನೀಡುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ ಆದೇಶಿಸಿದೆ.

ನಗರದ ನಿವಾಸಿ ಹೆಚ್.ಎನ್. ಶಿಲ್ಪ ಅವರು ತಮ್ಮ ಇಬ್ಬರು ಅಪ್ರಾಪ್ತ ಗಂಡು ಮಕ್ಕಳ ಹೆಸರಿನಲ್ಲಿ ತಲಾ 1 ಲಕ್ಷ ರೂ. ಹಣವನ್ನು 2010ರ ಮೇ 6ರಂದು ನಗರದ ವಿದ್ಯಾನಗರದಲ್ಲಿರುವ ಕೆನರಾ ಬ್ಯಾಂಕ್ ಶಾಖೆಯಲ್ಲಿ ಠೇವಣಿ ಮಾಡಿದ್ದರು.

2020ರ ಮೇ 6ರಂದು ಬಡ್ಡಿಯೊಂದಿಗೆ ಈ ಮೊತ್ತ 4,00,326 ರೂ. ಆಗಿತ್ತು. ಆದರೆ, ಪ್ಯಾನ್ ಕಾರ್ಡ್ ಮಾಹಿತಿ ನೀಡದ ಕಾರಣಕ್ಕಾಗಿ 45,486 ರೂ.ಗಳನ್ನು ಟಿಡಿಎಸ್ ಎಂದು ಕಡಿತ ಮಾಡಲಾಗಿದೆ. 3,54,840 ರೂ. ಮಾತ್ರ ನೀಡಲಾಗುವುದು ಎಂದು ಬ್ಯಾಂಕ್‌ನವರು ತಿಳಿಸಿದರು.

ಅಪ್ರಾಪ್ತ ಗಂಡು ಮಕ್ಕಳ ಗಾರ್ಡಿಯನ್ ಆಗಿದ್ದ ಶಿಲ್ಪ ಅವರು, ನಂತರದಲ್ಲಿ 16 (ಎ) ಫಾರಂ ಭರ್ತಿ ಮಾಡುವ ಮೂಲಕ ಟಿಡಿಎಸ್ ಹಣ ಪಡೆಯಲು ಅರ್ಜಿ ದಾಖಲಿಸಿದ್ದರು. ಆದರೆ, 20 ತಿಂಗಳು ತಡವಾಗಿ ಜನವರಿ 2022ರಂದು 32,049 ರೂ. ಮಾತ್ರ ನೀಡಲಾಯಿತು. ಆದಾಯ ತೆರಿಗೆ ಇಲಾಖೆಯ ನಿಯಮದ ಪ್ರಕಾರ ಇಷ್ಟು ಮಾತ್ರ ಹಣ ಸಿಗಲಿದೆ ಎಂದು ಬ್ಯಾಂಕ್‌ನವರು ತಿಳಿಸಿದರು.

ಬ್ಯಾಂಕ್‌ನವರು ಪ್ಯಾನ್ ಕಾರ್ಡ್ ವಿವರ ಪಡೆಯದೇ ಇರುವುದೇ ಈ ಸಮಸ್ಯೆಗೆ ಮೂಲ ಕಾರಣ. ಮಕ್ಕಳು ಅಪ್ರಾಪ್ತರಾಗಿದ್ದ ಕಾರಣ, ಠೇವಣಿ ಸಮಯದಲ್ಲಿ ತಾಯಿಯ ಪ್ಯಾನ್ ಕಾರ್ಡ್ ವಿವರ ಪಡೆಯಬೇಕಿತ್ತು. ನನ್ನ ಬಳಿ ಪ್ಯಾನ್ ಕಾರ್ಡ್ ಇದ್ದರೂ ಆ ಮಾಹಿತಿಯನ್ನು ಬ್ಯಾಂಕ್‌ನವರು ಪಡೆದಿರಲಿಲ್ಲ. ಇದು ಬ್ಯಾಂಕ್‌ನವರ ಅಲಕ್ಷ್ಯ ಎಂದು ಶಿಲ್ಪ ಅವರು ಆಯೋಗದಲ್ಲಿ 2024ರ ಮಾರ್ಚ್ 5ರಂದು ಅರ್ಜಿ ದಾಖಲಿಸಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಸೆಪ್ಟೆಂಬರ್ 3ರಂದು ತೀರ್ಪು ನೀಡಿ ಪರಿಹಾರ ಹಾಗೂ ವ್ಯತ್ಯಾಸದ ಹಣ ನೀಡುವಂತೆ ಆದೇಶಿಸಿದೆ.

ಆದಾಯ ತೆರಿಗೆ ಇಲಾಖೆ ಮರು ಪಾವತಿಸಲು ನಿರಾಕರಿಸಿದ ಟಿಡಿಎಸ್ ಮೊತ್ತವಾದ 15,575 ರೂ., ವ್ಯತ್ಯಾಸದ ಮೊತ್ತವಾದ 13,437 ರೂ., ದೂರುದಾರೆ ಅನುಭವಿಸಿದ ಮಾನಸಿಕ ಯಾತನೆಗೆ ಪರಿಹಾರವಾಗಿ 10 ಸಾವಿರ ರೂ. ಹಾಗೂ ಖಟ್ಲೆ ವೆಚ್ಚವಾಗಿ 5 ಸಾವಿರ ರೂ.ಗಳನ್ನು ಪಾವತಿಸಬೇಕು. ಒಟ್ಟು 44,012 ರೂ.ಗಳನ್ನು ಪಾವತಿಸಬೇಕು. ಆದೇಶದ 30 ದಿನಗಳಲ್ಲಿ ಈ ಹಣವನ್ನು ಮರು ಪಾವತಿಸದೇ ಇದ್ದರೆ ಶೇ.6ರ ವಾರ್ಷಿಕ ಬಡ್ಡಿ ಪಾವತಿಸಬೇಕು ಎಂದು ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಎಂ.ಐ. ಶಿಗ್ಲಿ ಅವರು ತೀರ್ಪು ನೀಡಿದ್ದಾರೆ. ತೀರ್ಪು ನೀಡಿದ ಆಯೋಗದಲ್ಲಿ ಸಿ.ಎಸ್. ತ್ಯಾಗರಾಜನ್ ಹಾಗೂ ಬಿ.ಯು. ಗೀತಾ ಸದಸ್ಯರಾಗಿದ್ದಾರೆ.


**ಮಾನ್ಯ ಹಿರಿಯ ಶ್ರೇಣಿಯ ಸಂಚಾರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಜಗಳೂರು.**

**ಇವರ ಘನ ಸನ್ನಿಧಾನದಲ್ಲಿ ಜಿ ಅಂಡ್ ಡಬ್ಲ್ಯೂ ಸಿ. 23/2024**

ಅರ್ಜಿದಾರರು : 1) ಶ್ರೀಮತಿ ಜಿ.ಜೆ. ಸುಗುಣ ಕೋಂ ದೀಪಕ್ ರಾಜ್, ವಯಸ್ಸು ಸುಮಾರು 40 ವರ್ಷಗಳು, ಗೃಹಿಣಿ, ವಾಸ : ಹುಚ್ಚವ್ವನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು. 2) ಎಸ್.ಹೆಚ್. ರೋಷಿತ್ ಬಿನ್ ಲೇಟ್ ಟಿ. ಹೊನ್ನರೆಡ್ಡಿ. ವಯಸ್ಸ 10 ವರ್ಷಗಳು ವಿದ್ಯಾರ್ಥಿ. ಖಾಯಂ ವಿಳಾಸ : ಹುಚ್ಚವ್ವನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು. - ವಿರುದ್ಧ - ಎದುರುದಾರರು : ಯಾರೂ ಇಲ್ಲ.

**ಪತ್ರಿಕಾ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ನೀಡಲಾದ ನೋಟಿಸು**

ಮೇಲ್ಕಂಡ ಅರ್ಜಿದಾರರು ಪೋಷಕ ಮತ್ತು ಸಂರಕ್ಷಣಾ ಕಾಯ್ದೆ, 1890ರ ಕಲಮು 7 ಹಾಗೂ 9ರಡಿಯಲ್ಲಿ ಎರಡನೇ ಅರ್ಜಿದಾರ ಎಸ್.ಹೆಚ್. ರೋಷಿತ್ ಬಿನ್ ಲೇಟ್ ಟಿ. ಹೊನ್ನರೆಡ್ಡಿ ಇವರ ಪೋಷಕರಾಗಿ ನೇಮಿಸಲು ಈ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಅರ್ಜಿಯಲ್ಲಿ ತನ್ನ ಸಹೋದರಿ ಜಿ.ಜೆ. ಸುಮ ಇವರು ದಿನಾಂಕ : 30.04.2021ರಂದು ಅವರ ಗಂಡ ಟಿ. ಹೊನ್ನರೆಡ್ಡಿ ಹಾಗೂ ಎಸ್.ಹೆಚ್. ರೋಷಿತ್ ಇವರನ್ನು ವಾರಸುದಾರರನ್ನು ಬಿಟ್ಟು ತೀರಿಕೊಂಡಿರುತ್ತಾರೆ. ನಂತರ ಟಿ. ಹೊನ್ನಾರೆಡ್ಡಿ ಇವರು ದಿನಾಂಕ : 28.12.2021 ರಂದು ತೀರಿಕೊಂಡಿರುತ್ತಾರೆ. ತಂದೆ ತಾಯಿ ಇಬ್ಬರು ತೀರಿಕೊಂಡ ನಂತರ ಅರ್ಜಿದಾರರಾಳದ ಜಿ.ಜೆ. ಸುಗುಣ ಇವರು ಅಪ್ರಾಪ್ತನಾದ ಎರಡನೇ ಅರ್ಜಿದಾರ ಎಸ್.ಹೆಚ್. ರೋಷಿತ್ ಇವರ ದೇಕೆ-ರೇಖೆ ಮಾಡುತ್ತಾ ಅವನಿಗೆ ವಿದ್ಯಾಭ್ಯಾಸ ಕೊಡಿಸುತ್ತಾ ಬಂದಿರುತ್ತಾರೆ. ಹೀಗಾಗಿ ಎರಡನೇ ಅರ್ಜಿದಾರ ಎಸ್.ಹೆಚ್. ರೋಷಿತ್ ಇವನ ಕಲ್ಯಾಣ ಮತ್ತು ಮುಂದಿನ ಉತ್ತಮ ಭವಿಷ್ಯಕ್ಕಾಗಿ ತಮ್ಮನ್ನು ಅವರ ಪೋಷಕನನ್ನಾಗಿ ನೇಮಿಸಲು ಈ ಅರ್ಜಿಯ ಮೂಲಕ ಕೋರಿಕೊಂಡಿರುತ್ತಾರೆ. ಅರ್ಜಿಯನ್ನು ದಾಖಲಿಸಿಕೊಂಡು ಈ ಪ್ರಕರಣದ ಮುದ್ದತ್ತನ್ನು ದಿನಾಂಕ : 6.11.2024 ರಂದು ನಿಗದಿಪಡಿಸಿರುತ್ತದೆ. ಈ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೇ, ಮೃತ ಜಿ.ಜೆ. ಸುಮ ಹಾಗೂ ಟಿ. ಹೊನ್ನರೆಡ್ಡಿ ಇವರ ಮಗನಾದ ಎಸ್.ಹೆಚ್. ರೋಷಿತ್ ಇವನ ಪೋಷಣೆಗಾಗಿ ಅರ್ಜಿದಾರರ ಸಲ್ಲಿಸಿದ ಅರ್ಜಿಗೆ ಸಂಂಧಿಸಿದಂತೆ ಯಾರಾದರೂ ಏನಾದರೂ ತಂಟೆ ತಕರಾರುಗಳು ಇದ್ದಲ್ಲಿ ಮೇಲ್ಕಂಡ ದಿನಾಂಕದಂದು ಬೆಳಿಗ್ಗೆ 11 ಗಂಟೆಗೆ ಈ ನ್ಯಾಯಾಲಯದ ಮುಂದೆ ತಾವಾಗಲೀ ಅಥವಾ ತಮ್ಮ ಪ್ರತಿನಿಧಿಗಳ ಮೂಲಕವಾಗಲೀ ಹಾಜರಾಗಿ ತಮ್ಮ ತಕರಾರು ಏನಾದರೂ ಇದ್ದಲ್ಲಿ ಲಸ್ಲಿಸತಕ್ಕದ್ದು. ಇಲ್ಲವಾದಲ್ಲಿ ಅರ್ಜಿದಾರರು ಸಲ್ಲಿಸಿದ ಪ್ರಕರಣವನ್ನು ತಮ್ಮ ಗೈರು ಹಾಜರಾತಿಯಲ್ಲಿ ತೀರ್ಮಾನಿಸಲಾಗುವುದು.

ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿ. : 13.9.2024 ರಂದು ನೀಡಲಾಗಿದೆ.

ಸಹಿ/- ಕೆ. ದಾದಾಪೀರ್
ಆರ್.ಜಿ. ಸತೀಶ್,
ಅರ್ಜಿದಾರರ ಪರ ವಕೀಲರು

ಘನ ನ್ಯಾಯಾಲಯದ ಆದೇಶಾನುಸಾರ
ಸಹಿ/- ಮುಖ್ಯ ಲಿಪಿಕಾಧಾರಿಗಳು, ಹಿರಿಯ ಶ್ರೇಣಿಯ ಸಂಚಾರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಜಗಳೂರು.

**ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಸಿ.ಜೆ.ಎಂ. ನ್ಯಾಯಾಲಯ, ದಾವಣಗೆರೆ.**

**ಸಿ.ಆರ್.ಮಿಸ್ ನಂ.: 332/2024**

ಅರ್ಜಿದಾರರು :1. ಶ್ರೀ ಚಂದ್ರಪ್ಪ ಬಿನ್ ಲೇಟ್ ಸಣ್ಣ ಕರಿಯಪ್ಪ, ವಯಸ್ಸು ಸುಮಾರು 50 ವರ್ಷ, ವಾಸ : ನೇರ್ಲಿಗಿ ಗ್ರಾಮ ಮತ್ತು ಅಂಚೆ ಆನಗೋಡು, ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ. 2) ಶ್ರೀ ತಿಪ್ಪೇಸ್ವಾಮಿ ಬಿನ್ ಲೇಟ್ ಸಣ್ಣ ಕರಿಯಪ್ಪ, ವಯಸ್ಸು ಸುಮಾರು 48 ವರ್ಷ, ವಾಸ : ಮಂಡಲೂರು ಗೊಲ್ಲರಹಟ್ಟಿ ಗ್ರಾಮ, ಆನಗೋಡು, ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ. 3)ಶ್ರೀನಿವಾಸ ಬಿನ್ ಲೇಟ್ ಸಣ್ಣ ಕರಿಯಪ್ಪ, ವಯಸ್ಸು ಸುಮಾರು 46 ವರ್ಷ, ವಾಸ: ನೇರ್ಲಿಗಿ ಗ್ರಾಮ ಮತ್ತು ಅಂಚೆ ಆನಗೋಡು, ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆ. - ವಿರುದ್ಧ -

ಎದುರುದಾರರು : 1) ತಹಶೀಲ್ದಾರ್ ಗ್ರೇಡ್, ದಾವಣಗೆರೆ ತಾಲ್ಲೂಕು & ಜಿಲ್ಲೆ. 2) ಶ್ರೀಮತಿ ಪುಟ್ಟಮ್ಮ ಬಿನ್ ಲೇಟ್ ಸಣ್ಣ ಕರಿಯಪ್ಪ, ಗಂಡ ಕೆ. ತಿಪ್ಪೇಸ್ವಾಮಿ, ವಯಸ್ಸು ಸುಮಾರು 52ವರ್ಷ, ವಾಸ: ಹುಲ್ಲೇಹಾಳ್ ಗ್ರಾಮ, ಭರಮಸಾಗರ ಹೋಬಳಿ, ಚಿತ್ರದುರ್ಗ ತಾಲ್ಲೂಕು & ಜಿಲ್ಲೆ.

**ಅರ್ಜಿದಾರರ ಪರ ನೀಡಲಾದ ಪ್ರಕಟಣಾ ನೋಟೀಸು**

ಅರ್ಜಿದಾರರ ತಂದೆಯಾದ ಶ್ರೀ ದಿ|| ಸಣ್ಣ ಕರಿಯಪ್ಪ ಬಿನ್ ಪಾಲಪ್ಪ ಇವರು ಮಂಡಲೂರು ಗೊಲ್ಲರಹಟ್ಟಿ ಗ್ರಾಮ, ಆನಗೋಡು, ಹೋಬಳಿ, ದಾವಣಗೆರೆ ತಾಲ್ಲೂಕು & ಜಿಲ್ಲೆಯ ಮೇಲ್ಕಾಣಿಸಿದ ವಿಳಾಸದ ಮನೆಯಲ್ಲಿ ದಿನಾಂಕ 20.04.1979 ರಂದು ಮರಣ ಹೊಂದಿರುತ್ತಾರೆ. ಅರ್ಜಿದಾರರು ಮೇಲ್ಕಂಡ ಪ್ರಕರಣವನ್ನು ತಮ್ಮ ತಂದೆಯ ಮರಣ ಪ್ರಮಾಣಪತ್ರವನ್ನು ಪಡೆಯಲು ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಇದ್ದಲ್ಲಿ ಅಂತಹವರು ದಿನಾಂಕ : 23.10.2024 ರಂದು ಬೆಳಿಗ್ಗೆ 11.00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಾಗಿ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಏಕಪಕ್ಷೀಯ ತೀರ್ಮಾನವಾಗಿ ತೆಗೆದುಕೊಳ್ಳಗಾವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ, ದಿನಾಂಕ : 03.09.2024 ರಂದು ಹೊರಡಿಸಲ್ಪಟ್ಟಿದೆ.

ಸಹಿ/- ಅಭಿಲಾಷ ಎಸ್.ಹೆಚ್.
ಅರ್ಜಿದಾರರ ಪರ ವಕೀಲರು

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಸಿಜೆಎಂ. ನ್ಯಾಯಾಲಯ, ದಾವಣಗೆರೆ.



# ಹಳೆ ಊರಲ್ಲಿನ ಹಳೆ ಕಾಲದ ಗಣೇಶೋತ್ಸವ ಸ್ವಾರಸ್ಯಗಳು

**ಚತುರ್ಥಿಯಂದು ಸ್ಥಾಪಿಸಿದ ಗಣೇಶನನ್ನು ನೋಡಲು ಜನ ಹೋಗುವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಭರದಿಂದ ನಡೆಯುತ್ತಿವೆ.**

## 'ಗಣೇಶಾರತಿ v/s ಹಲ್ಲಿ ಶಾಪ ?!!'

> **ನಮ್ಮ ಬಾಲ್ಯದಲ್ಲಿ ಹಳೆ ದಾವಣಗೆರೆ ಭಾಗದಲ್ಲಿನ ಗಣೇಶೋತ್ಸವದ ಸ್ವಾರಸ್ಯ...**
> **- ಹೆಚ್.ಬಿ.ಮಂಜುನಾಥ,** ಹಿರಿಯ ಪತ್ರಕರ್ತ

ಈಗ್ಗೆ ಸರಿಯಾಗಿ 60 ವರ್ಷಗಳ ಕೆಳಗೆ ನಾನು ಹಳೇ ದಾವಣಗೆರೆ ಭಾಗದ ದೇವಾಂಗಪೇಟೆಯ ಸಿಟಿ ಮಿಡ್ಲ್ ಸ್ಕೂಲ್‌ನಲ್ಲಿ ಓದುತ್ತಿದ್ದೆ. ಅದು ಬಾಲಕರ ಮಾಧ್ಯಮಿಕ ಶಾಲೆ. ಕೋಗುಂಡಿ ಹಾಲಪ್ಪನವರೂ ನಮಗೆ ಪಾಠ ಮಾಡಿದ್ದರು. ಅಂದನೂರು ಮಹಾಲಿಂಗಪ್ಪ ಆಗ ಮುಖ್ಯೋಪಾಧ್ಯಾಯರು.



ಸಿದ್ಧನಂಜಪ್ಪನವರು, ಪಿನಾಕೇಶ್ವರಯ್ಯ, ಚನ್ನವೀರಯ್ಯ, ಶೇಷ ಜೋಯಿಸರು, ಶರಣಪ್ಪ, ಮುರಿಗೆಪ್ಪ, ಬೇತೂರು ಮಲ್ಕಪ್ಪ, ಬಸವಲಿಂಗಪ್ಪ, ನಾಗರತ್ನಮ್ಮ ಮುಂತಾದವರು ನಮಗೆಲ್ಲಾ ಅಧ್ಯಾಪಕ ವರ್ಗದವರು.

ಸಂಪ್ರದಾಯದಂತೆ ಗಣೇಶ ಚತುರ್ಥಿಯಂದು ನಮ್ಮ ಶಾಲೆಯಲ್ಲೂ ಗಣೇಶನ ಪ್ರತಿಷ್ಠಾಪನೆ ಮಾಡಲಾಯಿತು. ಶೇಷ ಜೋಯಿಸ ಮೇಷ್ಟ್ರು ವೇದೋಕ್ತ ಮಂತ್ರಗಳನ್ನು ಹೇಳಿ ಕ್ರಮವತ್ತಾಗಿ ಪೂಜೆ ಸಹಾ ಮಾಡಿದರು. ನಮ್ಮ ಸಹಪಾಠಿ, ಬಹುಷಃ ಹೆಸರು ರಾಜು ಎಂದಿರಬೇಕು. ಗಣೇಶ ವಂದನೆಯ ಹಾಡನ್ನು ಹೇಳಿದ. **'ಜಯಶಂಕರ ವರ ಗಣಾಧಿಪನಿಗೆ, ನಮಿಪೆವು ನಮಿಪೆವು ಗಣಾಧಿಪನಿಗೆ, ಸಂಗೀತೋಮಯ ಕಲಾವಿಶಾರಗೆ, ಸುಗುಣಭರಿತ ಸುಖ ಶಾಂತಿಯ ನೀಡ್ವಗೆ, ಶಿವಶಂಕರ ವರ ಗೌರಿ ಕುವರಗೆ, ನಮಿಪೆವು ನಮಿಪೆವು ಗಣಾಧಿಪನಿಗೆ, ಜಯಶಂಕರವರ ಗಣಾಧಿಪನಿಗೆ..'** ಚೆನ್ನಾಗಿ ಹಾಡಿದ.

ಮಂಗಳಾರತಿ ಪ್ರಾರಂಭವಾಯಿತು. **'ಆರತಿ ಹಾಡನ್ನು ನೀನೇ ಹೇಳಪ್ಪಾ'** ಎಂದು ಹೆಡ್ ಮಾಸ್ಟರ್ ಮಹಾಲಿಂಗಪ್ಪ ರಾಜುಗೆ ಹೇಳಿದರು. ರಾಜು ಪ್ರಾರಂಭ ಮಾಡಿದ. 'ಮಾಡೂವೆನಾರುತಿಯಾ ಶ್ರೀರಾಮಚಂದ್ರಗೀಗಾ, ಬೆಳಗೂವೆನಾರುತೀಯ. ಗುರು ವಿಶ್ವಮಿತ್ರ ಕರೆದಾ, ಲಕ್ಷ್ಮಣನ ಕೂಡಿ ಹೋದ. ರಾಕ್ಷಸನ ರಾಮ ಕೊಂದಾ, ತಾನೊಂದೇ ಬಾಣದಿಂದ..' ಆರತಿ ಹಾಡಿಗೆ ಎಲ್ಲರೂ ತಲೆದೂಗುತ್ತಿದ್ದರು. ರಾಜು ಆರತಿ ಹಾಡನ್ನು ಮುಂದುವರೆಸಿದ.

**'ಹಲ್ಲೀಯು** ಶಾಪದಿಂದಾ, ಹೋದಾಳು ಮುಕ್ತಿಯಿಂದ, ಬಾರೋ ಶ್ರೀರಾಮ ಬಾರೋ, ನೀ ಎಮಗೆ ದಯವ ತೋರೋ, ಮಾಡೂವೆನಾರುತೀಯ ಶ್ರೀರಾಮಚಂದ್ರಗೀಗ, ಬೆಳಗೂವೆನಾರುತೀಯ' ಎಂದು ಮುಗಿಸಿದ.

ಹಾಡಿನಲ್ಲಿ **'ಹಲ್ಲೀಯು ಶಾಪದಿಂದಾ, ಹೋದಾಳೊ ಮುಕ್ತಿಯಿಂದ'** ಎಂಬ ಸಾಲಿನ ಬಗ್ಗೆ ಎಲ್ಲರಲ್ಲೂ ಗೊಂದಲ ಉಂಟಾಯಿತು. ಏನಿದು? ರಾಮಾಯಣಕ್ಕೂ ಹಲ್ಲಿ ಶಾಪಕ್ಕೂ ಏನು ಸಂಬಂಧ? ರಾಮಾಯಣದಲ್ಲಿ ಹಲ್ಲಿ ಶಾಪದ ಪ್ರಸಂಗ ಎಲ್ಲಿ ಬರುತ್ತದೆ? ಮೇಷ್ಟ್ರುಗಳು ಒಬ್ಬರನ್ನೊಬ್ಬರು ಕೇಳಿದರು. ಬಗೆ ಹರಿಯಲಿಲ್ಲ. 'ಏನಲೇ ಅದು ಹಲ್ಲಿ ಶಾಪ?!' ರಾಜುವನ್ನೇ ಕೇಳಿದರು. 'ಅದು ಹಂಗೇ ಇರೋದು ಸಾ' ಎಂದ ರಾಜು. 'ಲೇ ಏನರಾ ಹಿಂದೆ ಮುಂದೆ ಸಾಲು ಬಿಟ್ಟೀಯೆನಲೇ, ನೆನಪು ಮಾಡ್ಕೊಂಡು ಹೇಳಲೇ' ಎಂದರು. ರಾಜು ನೆನಪು ಮಾಡಿಕೊಂಡು ಹೇಳಿದ. 'ಗೌತಮರ ಬಳಿಗೆ ಹೋದಾ, ಕಲ್ಲನ್ನು ಮೆಟ್ಟಿನಿಂದ. ಹಲ್ಲಿಯೂ ಶಾಪದಿಂದಾ, ಹೋದಾಳು ಮುಕ್ತಿಯಿಂದ..' ತಕ್ಷಣ ಎಲ್ಲರಿಗೂ ಅರ್ಥವಾಯ್ತು. ಗೊಳ್ಳೆಂದು ನಕ್ಕರು. ರಾಜುವನ್ನು ಹತ್ತಿರ ಕರೆದು ಹೇಳಿದರು. 'ಲೇ ಅದು **ಹಲ್ಲೀಯು** ಶಾಪದಿಂದ ಅಲ್ಲ ಕಣಲೇ, **ಅಹಲ್ಯೇಯು** ಶಾಪದಿಂದಾ ಅಂತ ಹೇಳ್ಬೇಕಲೇ, **ಅಹಲ್ಯನ್ನ** ತಗೊಂಡು ಹೋಗಿ ಹಲ್ಲಿ ಮಾಡಿದ್ಯಲ್ಲಪ್ಪ!!' ಎಂದರು.

## ಒಂದು ದೇಶ – ಒಂದು ಚುನಾವಣೆ ಬಿಜೆಪಿಯ ಪ್ರಹಸನ : ವಿಪಕ್ಷಗಳ ಟೀಕೆ

ನವದೆಹಲಿ, ಸೆ. 16 - ಈಗಿರುವ ಸಂವಿಧಾನದಲ್ಲಿ 'ಒಂದು ದೇಶ - ಒಂದು ಚುನಾವಣೆ' ಜಾರಿಗೆ ತರಲು ಸಾಧ್ಯವಾಗದು. ಕೇಂದ್ರ ಬಿಜೆಪಿ ಸರ್ಕಾರ ಈ ವಿಷಯದಲ್ಲಿ ಪ್ರಹಸನ ನಡೆಸುತ್ತಿದೆ ಎಂದು ಪ್ರತಿಪಕ್ಷಗಳು ಟೀಕಿಸಿವೆ.

'ಒಂದು ದೇಶ ಒಂದು ಚುನಾವಣೆ' ಕಾರ್ಯಸಾಧು ಅಲ್ಲ ಎಂದು ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಹಾಗೂ ಸಿಪಿಐ ತಿಳಿಸಿವೆ.

ಒಂದು ದೇಶ ಒಂದು ಚುನಾವಣೆ ಯೋಜನೆಯನ್ನು ಜಾರಿಗೆ ತರಲು ಸಾಧ್ಯವಾಗದು. ಸರ್ಕಾರ ವಾಸ್ತವಿಕ ಸಮಸ್ಯೆಗಳಿಗೆ ಕಣ್ಣು ಮುಚ್ಚಿ ಕೊಂಡಿದೆ. ಅವಾಸ್ತವಿಕ ಯೋಜನೆಗಳ ಕುರಿತು ಮಾಹಿತಿ ಸೋರಿಕೆ ಮಾಡುವ ಮೂಲಕ ದಿಕ್ಕು ತಪ್ಪಿಸುತ್ತಿದೆ ಎಂದು ಕಾಂಗ್ರೆಸ್ ವಕ್ತಾರೆ ಸುಪ್ರಿಯ ಶ್ರೀನೇಟ್ ಟೀಕಿಸಿದ್ದಾರೆ. ಏಕಕಾಲಕ್ಕೆ ಚುನಾವಣೆ ನಡೆಸುವ ಕುರಿತು ಯಾವುದೇ ಕರಡು ರೂಪಿಸಿಲ್ಲ. ಈ ಬಗ್ಗೆ ಯಾವುದೇ ಚರ್ಚೆ ನಡೆಸಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಜೊತೆ ಮಾತುಕತೆ ನಡೆಸಲು ಸರ್ಕಾರ ಯಾವುದೇ ಪ್ರಯತ್ನ ನಡೆಸಿಲ್ಲ ಎಂದು ಶ್ರೀನೇಟ್ ಹೇಳಿದ್ದಾರೆ.

ಏಕಕಾಲದ ಚುನಾವಣೆ ಹೆಸರಿನಲ್ಲಿ ಸರ್ಕಾರ ಮತ್ತೊಂದು ಪ್ರಹಸನ ನಡೆಸಿದೆ. ಒಂದೇ ಸಮಯದಲ್ಲಿ ಚುನಾವಣೆ ನಡೆಸುವ ಉದ್ದೇಶ ಇದ್ದಿದ್ದರೆ ಹರಿಯಾಣ ಹಾಗೂ ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗಳ ಜೊತೆಗೆ ಮಹಾರಾಷ್ಟ್ರದ ಚುನಾವಣೆಯನ್ನೂ ಏಕೆ ಘೋಷಿಸಿಲ್ಲ? ಎಂದು ತೃಣಮೂಲ ಕಾಂಗ್ರೆಸ್ ನಾಯಕ ಡೆರಿಕ್ ಒಬ್ರೀನ್ ಪ್ರಶ್ನಿಸಿದ್ದಾರೆ.

ಒಂದು ದೇಶ ಒಂದು ಚುನಾವಣೆ ಪ್ರಸ್ತಾಪಕ್ಕೆ ನಾವು ಬೆಂಬಲಿಸುವುದಿಲ್ಲ ಎಂದು ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ ತಿಳಿಸಿದ್ದಾರೆ.

## ಹೊಲಿಗೆ ಯಂತ್ರ ಖರೀದಿಗೆ ಅರ್ಜಿ

ದಾವಣಗೆರೆ, ಸೆ. 16 - ಹೊಲಿಗೆ ತರಬೇತಿ ಪಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಸಮುದಾಯಕ್ಕೆ ಸೇರಿದ ಮಹಿಳಾ ಫಲಾನುಭವಿಗಳಿಗೆ ಹೊಲಿಗೆ ಯಂತ್ರ ಖರೀದಿಸಿ ವಿತರಿಸುವ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಮಹಾನಗರ ಪಾಲಿಕೆಯ ವೆಬ್‌ಸೈಟ್ www.davanagerecity.gov.in ಮೂಲಕ ಅಥವಾ ಕಚೇರಿಗೆ ಖುದ್ದು ಭೇಟಿ ನೀಡಿ ಇದೇ ದಿನಾಂಕ 26 ರೊಳಗಾಗಿ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಲ್ಯಾಣ ಶಾಖೆ, ಮಹಾನಗರಪಾಲಿಕೆ, ದಾವಣಗೆರೆ (ಹಳೇ ಕಂದಾಯ ಶಾಖೆ ಕಟ್ಟಡ) ಇಲ್ಲಿ ಸಂಪರ್ಕಿಸಲು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.



## ಮಹಿಳೆಯರಿಗೆ ಆತ್ಮರಕ್ಷಣೆ ಜಾಗೃತಿ ಅಗತ್ಯ

### 'ನಾರಿ ಶಕ್ತಿ' ಉದ್ಘಾಟಿಸಿ, ಸುರಕ್ಷಾ ಆಪ್‌ಗೆ ಚಾಲನೆ ನೀಡಿದ ಸಂಸದೆ ಡಾ.ಪ್ರಭಾ

ದಾವಣಗೆರೆ, ಸೆ. 16- ಶಾಲಾ-ಕಾಲೇಜುಗಳಲ್ಲಿ ಸಹಾಯವಾಣಿ ಹಾಗೂ ಕಾನೂನು ಸುರಕ್ಷತೆ ಜೊತೆಗೆ ಆತ್ಮರಕ್ಷಣೆ ಜಾಗೃತಿ ಮೂಡಿಸುವ ಅಗತ್ಯವಿದ್ದು, ಹೆಣ್ಣು ಮಕ್ಕಳಿಗೆ ಸುರಕ್ಷತೆಯ ವಾತಾವರಣ ನಿರ್ಮಾಣ ಮಾಡಬೇಕಾಗಿದೆ ಎಂದು ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ ಸಹಯೋಗದಲ್ಲಿ ಮೊನ್ನೆ ಏರ್ಪಾಡಾಗಿದ್ದ 'ನಾರಿ ಶಕ್ತಿ' ಕಾರ್ಯಕ್ರಮವನ್ನು ಉದ್ಘಾಟಿಸಿ, ಸುರಕ್ಷಾ ಆಪ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ದೇಶದಲ್ಲಿ ಮಹಿಳೆಯರಿಗೆ ಹೆಚ್ಚಿನ ಸುರಕ್ಷತೆ ಕಲ್ಪಿಸುವ ಜೊತೆಗೆ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಿಸುವ ಅವಶ್ಯವಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪಶ್ಚಿಮ ಬಂಗಾಳ, ಹುಬ್ಬಳ್ಳಿಯಲ್ಲಿ ನಡೆದ ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಗಮನಿಸಿದರೆ ನಾರಿ ಶಕ್ತಿಯಂತಹ ಆತ್ಮರಕ್ಷಣೆಯ ಕಾರ್ಯಕ್ರಮಗಳನ್ನು ರೂಪಿಸುವ ಅವಶ್ಯಕತೆ ಇದೆ ಎಂದು ಹೇಳಿದರು.

ವಿದ್ಯಾರ್ಥಿನಿಯರ ನಿಲಯಗಳಲ್ಲಿರುವ ಹೆಣ್ಣು ಮಕ್ಕಳು ತಮ್ಮ ತಂದೆ-ತಾಯಿಗಳಿಗೆ ದೈನಂದಿನ ಚಟುವಟಿಕೆಗಳ ಬಗ್ಗೆ ನೈಜ ಮಾಹಿತಿ ನೀಡುತ್ತಿರಬೇಕು. ಹೆಣ್ಣು ಮಕ್ಕಳು ಕೂಡ ಮೌಲ್ಯಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಉತ್ತಮ ಸಾಧನೆ ಮಾಡಬೇಕೆಂದು ಕರೆ ನೀಡಿದರು.

ಪ್ರತಿಜ್ಞಾ ವಿಧಿ ಬೋಧಿಸಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಮಾತನಾಡಿ, ಕರಾಟೆ ಕಲೆ ಮನುಷ್ಯನ ದೈಹಿಕ, ಮಾನಸಿಕ ಆರೋಗ್ಯ ಸುಸ್ಥಿತಿಯಲ್ಲಿಡುವ ಜೊತೆಗೆ ವೈಯಕ್ತಿಕ ಮತ್ತು ಸಾರ್ವಜನಿಕ ಬದುಕಿನ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ದಾವಣಗೆರೆ ಜಿಲ್ಲೆಯಲ್ಲಿ ಮಹಿಳೆಯರ ಸುರಕ್ಷತೆ ಯನ್ನು ಇನ್ನಷ್ಟು ಬಲಪಡಿಸಲು ಸುರಕ್ಷಾ ಆಪ್ ಜೊತೆಗೆ, ದುರ್ಗಾ ಪಡೆಯನ್ನು ಮತ್ತಷ್ಟು ಕಾರ್ಯಪ್ರವೃತ್ತ ಗೊಳಿಸಲಾಗಿದೆ ಎಂದರು.

ಹೆಣ್ಣು ಮಕ್ಕಳ ಮೇಲಾಗುವ ದೌರ್ಜನ್ಯ ತಡೆಗಟ್ಟಲು ಪೋಕ್ಸೋ ಕಾಯ್ದೆ ಇದ್ದು, ಶಾಲಾ-ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ದೈಹಿಕ ಅಥವಾ ಮಾನಸಿಕ ತೊಂದರೆಗೆ ಒಳಗಾದರೆ ಕೂಡಲೇ ಪಾಲಕರ ಗಮನಕ್ಕೆ ತರುವಂತೆ ಹೇಳಿದರು.

ಜಿಲ್ಲಾ ಪಂಚಾಯತಿ ಸಿಇಓ ಸುರೇಶ್ ಬಿ. ಇಟ್ನಾಳ್ ಮಾತನಾಡಿ, ಹೆಣ್ಣು ಮಕ್ಕಳು ಸ್ವಯಂ ರಕ್ಷಣೆ ಕೌಶಲ್ಯ ಹೊಂದುವಂತಾಗಲಿ ಎನ್ನುವ ಉದ್ದೇಶದಿಂದ ಈ ವರ್ಷ 11,229 ಬಾಲಕಿಯರು ಹಾಗೂ ವಸತಿ ನಿಲಯದ 3000 ವಿದ್ಯಾರ್ಥಿಗಳಿಗೆ ಕರಾಟೆ ಸೇರಿದಂತೆ, ಇತರೆ ಸಮರ ಕಲೆಯ ತರಬೇತಿ ನೀಡುವ ಗುರಿ ಹೊಂದಿರುವುದಾಗಿ ತಿಳಿಸಿದರು.

ಕರಾಟೆ ಜೊತೆಗೆ ಜೋಡೋ, ಮಾರ್ಷಲ್ ಆರ್ಟ್ಸ್ ಸೇರಿದಂತೆ ಇನ್ನಿತರೆ ಕಲೆಗಳ ತರಬೇತಿ ನೀಡಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಹೆಣ್ಣು ಮಕ್ಕಳಿಗಾಗಿ ಸುರಕ್ಷಾ ಆ್ಯಪ್ ಸಿದ್ದಪಡಿಸಲಾಗಿದ್ದು, ಇದುವರೆಗೂ 150 ಕ್ಕೂ ಹೆಚ್ಚು ಕರೆಗಳು ಬಂದಿವೆ. ಇದರನ್ವಯ ಪೊಲೀಸರು ಕ್ರಮ ಜರುಗಿಸಿದ್ದಾರೆ. ಅದರಂತೆ ಎಲ್ಲಾ ಹೆಣ್ಣು ಮಕ್ಕಳು ಸುರಕ್ಷಾ ಆ್ಯಪ್ ಅಥವಾ 112ಗೆ ಕರೆ ಮಾಡುವ ಮೂಲಕ ಪೊಲೀಸರನ್ನು ಸಂಪರ್ಕಿಸಿ ಸಹಾಯ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಹೆಣ್ಣು ಮಕ್ಕಳು ಶಾಲಾ-ಕಾಲೇಜುಗಳಿಗೆ ಬರುವುದು ಕೇವಲ ಶಿಕ್ಷಣ ಪಡೆದುಕೊಳ್ಳುವುದಕ್ಕೆ ಅಲ್ಲ. ತಮ್ಮನ್ನು ತಾವು ಕಾಪಾಡಿಕೊಳ್ಳುವ ಜೊತೆಗೆ ಧ್ವನಿ ಇಲ್ಲದವರಿಗೆ ಧ್ವನಿಯಾಗಬೇಕು. ಆಗ ಮಾತ್ರ ನೀವು ಪಡೆದ ಶಿಕ್ಷಣಕ್ಕೆ ಬೆಲೆ ಬರುತ್ತದೆ ಎಂದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಮಲ್ಲಿಕಾರ್ಜುನ್ ಮಠದ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ. ನಾಗರಾಜ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ಗಾಯತ್ರಿ, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ್ ಎಂ. ಸಂತೋಷ್, ಡಿಡಿಪಿಐ ಜಿ.ಕೊಟ್ರೇಶ್, ಮಂಜುನಾಥ್ ಸೇರಿದಂತೆ ಕರಾಟೆ ಕೋಚ್‌ಗಳು, ವಿವಿಧ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದರು.

## ನಮೋ ಭಾರತ್ ರೈಲು : ಬಸ್‌ಗಿಂತ ಪ್ರಯಾಣ ದರ ಕಡಿಮೆ, ವೇಗ ಹೆಚ್ಚು

ಭುಜ್, ಸೆ. 16 - ನಮೋ ಭಾರತ್ ರ್‍ಯಾಪಿಡ್ ರೈಲು ಪ್ರಯಾಣ ದರ ಯಾವುದೇ ಬಸ್ ಪ್ರಯಾಣ ದರಕ್ಕಿಂತ ಕಡಿಮೆ ಇದೆ ಎಂದು ಪಶ್ಚಿಮ ರೈಲ್ವೆ ವಕ್ತಾರರು ಹೇಳಿದ್ದಾರೆ.

ಈ ರೈಲು ಭುಜ್ ಹಾಗೂ ಅಹಮದಾಬಾದ್ ನಡುವೆ 11 ನಿಲ್ದಾಣಗಳಲ್ಲಿ ಸಾಗುತ್ತದೆ. ಭುಜ್ ಹಾಗೂ ಗಾಂಧಿಧಾಮದ ನಡುವಿನ ಬಸ್ ಪ್ರಯಾಣ ದರ 110 ರೂ. ಆಗಿದೆ. ಆದರೆ, ರೈಲಿನಲ್ಲಿ 75 ರೂ.ಗಳಿಗೆ ಈ ಪ್ರಯಾಣ ಮಾಡಬಹುದು ಎಂದು ಪಶ್ಚಿಮ ರೈಲ್ವೇ ವಕ್ತಾರ ವಿನೀತ್ ಅಭಿಷೇಕ್ ತಿಳಿಸಿದ್ದಾರೆ.

ಆರಂಭದಲ್ಲಿ ಈ ರೈಲಿಗೆ ವಂದೇ ಮೆಟ್ರೋ ಎಂಬ ಹೆಸರಿಡಲಾಗಿತ್ತು. ಈ ಹೆಸರನ್ನು ಕರಪತ್ರಗಳಲ್ಲಿ ಮುದ್ರಿಸಿ ಹಂಚಲಾಗಿತ್ತು. ಆದರೆ ಕೊನೆ ಗಳಿಗೆಯಲ್ಲಿ ಹೆಸರನ್ನು ನಮೋ ಭಾರತ್ ರ್‍ಯಾಪಿಡ್ ರೈಲು ಎಂದು ಬದಲಿಸಲಾಗಿದೆ.

ಇತರೆ ಮೆಟ್ರೋ ರೈಲುಗಳು ಅಲ್ಪ ದೂರಕ್ಕೆ ಮಾತ್ರ ಸಂಚರಿಸುತ್ತವೆ. ಆದರೆ ನಮೋ ಭಾರತ್ ರೈಲು ನಗರಗಳ ನಡುವೆ ಸಂಚರಿಸುತ್ತದೆ.

ನಮೋ ಭಾರತ್ ರೈಲು ಬಸ್‌ಗಳಿಗಿಂತ ವೇಗವಾಗಿ ಚಲಿಸುತ್ತದೆ. ಭುಜ್‌ನಿಂದ ಗಾಂಧಿಧಾಮಕ್ಕೆ ತೆರಳಲು ಬಸ್‌ಗೆ 2 ಗಂಟೆ ಬೇಕಾಗಿದ್ದಾರೆ, ನಮೋ ಭಾರತ್ ರೈಲಿಗೆ 55 ನಿಮಿಷ ಸಾಕು ಎಂದು ವಕ್ತಾರ ಅಭಿಷೇಕ್ ತಿಳಿಸಿದರು.

12 ಭೋಗಿಗಳ ಈ ರೈಲು 1950 ಸೀಟುಗಳನ್ನು ಹೊಂದಿದೆ. ಆದರೆ ನಿಂತುಕೊಂಡು ಪ್ರಯಾಣ ಮಾಡಲು ಅವಕಾಶವಿದೆ. ಒಟ್ಟಾರೆ ಈ ರೈಲಿನಲ್ಲಿ 3200 ಜನ ಪ್ರಯಾಣಿಸಬಹುದು ಎಂದವರು ಹೇಳಿದರು. ಅಹಮದಾಬಾದ್‌ವರೆಗಿನ 359 ಕಿಲೋಮೀಟರ್ ಮಾರ್ಗವನ್ನು ಈ ರೈಲು 5.45 ಗಂಟೆಗಳಲ್ಲಿ ಪೂರೈಸಲಿದೆ.

## ಒಂದು ದೇಶ - ಒಂದು ಚುನಾವಣೆ ಈಗಿರುವ ಸಂವಿಧಾನದಲ್ಲಿ ಸಾಧ್ಯವಾಗದು : ಚಿದಂಬರಂ

ಚಂಡೀಘಡ, ಸೆ. 16 - ಒಂದು ದೇಶ - ಒಂದು ಚುನಾವಣೆಯು ಈಗಿರುವ ಸಂವಿಧಾನದಲ್ಲಿ ಸಾಧ್ಯವಾಗುವುದಿಲ್ಲ. ಇದಕ್ಕೆ ಕನಿಷ್ಠ ಐದು ತಿದ್ದುಪಡಿಗಳ ಅಗತ್ಯವಿದೆ ಎಂದು ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಹೇಳಿದ್ದಾರೆ.

ಪ್ರಸಕ್ತ ಅವಧಿಯಲ್ಲೇ ಒಂದು ದೇಶ - ಒಂದು ಚುನಾವಣೆ ಜಾರಿಗೆ ತರುವುದಾಗಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ನಿರ್ಧರಿಸಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಸಂವಿಧಾನಕ್ಕೆ ತಿದ್ದುಪಡಿ ತರಲು ಲೋಕಸಭೆ ಇಲ್ಲವೇ ರಾಜ್ಯಸಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಸಂಖ್ಯಾಬಲ ಇಲ್ಲ ಎಂದು ಚಿದಂಬರಂ ಹೇಳಿದ್ದಾರೆ.

ಒಂದು ದೇಶ - ಒಂದು ಚುನಾವಣೆಗೆ ದೊಡ್ಡ ಸಂವಿಧಾನಿಕ ಅಡಚಣೆಗಳಿವೆ. ಇದು ಸಾಧ್ಯವಾಗದು. ಒಂದು ದೇಶ - ಒಂದು ಚುನಾವಣೆಗೆ ಐ.ಎನ್.ಡಿ.ಐ.ಎ. ಬಣ ವಿರೋಧಿಸಲಿದೆ ಎಂದವರು ಹೇಳಿದ್ದಾರೆ.

## ದ್ವೇಷ ತುಂಬಿದವರಿಂದ ಭಾರತದ ತೇಜೋವಧೆ

**(1ನೇ ಪುಟದಿಂದ)** ಕೆಲವರು ವಿರುದ್ಧ ದಿಕ್ಕಿನಲ್ಲಿದ್ದಾರೆ. ಅವರು ದೇಶದ ಐಕ್ಯತೆ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂದು ಪ್ರಧಾನಿ ಹೇಳಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು 500ಕ್ಕೂ ಹೆಚ್ಚು ಪ್ರಾಂತ್ಯಗಳನ್ನು ಒಗ್ಗೂಡಿಸಿದರು. ಆದರೆ, ಅಧಿಕಾರ ದಾಹದಲ್ಲಿರುವ ಕೆಲವರು ದೇಶವನ್ನು ಒಡೆಯುವ ಹುನ್ನಾರ ನಡೆಸಿದ್ದಾರೆ ಎಂದು ಮೋದಿ ಟೀಕಿಸಿದರು.

ಜಮ್ಮು ಮತ್ತು ಕಾಶ್ಮೀರದಲ್ಲಿ 370ನೇ ವಿಧಿ ಮತ್ತೆ ಜಾರಿಗೆ ತರುತ್ತೇವೆ ಎಂದು ಪ್ರತಿಪಕ್ಷಗಳು ಒಂದೇ ಧ್ವನಿಯಲ್ಲಿ ಹೇಳುತ್ತಿವೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಎರಡು ಸಂವಿಧಾನ ಜಾರಿಗೆ ತರಲು ಅವರು ಬಯಸಿದ್ದಾರೆ. ಅವರು ಓಲೈಕೆಯ ಎಲ್ಲಾ ಮಿತಿಗಳನ್ನು ಮೀರುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

## ಗೌಡ ಸಾರಸ್ವತ ಸಮಾಜದ ಗಣೇಶೋತ್ಸವ



ದಾವಣಗೆರೆ, ಸೆ.16- ನಗರದ ಗೌಡ ಸಾರಸ್ವತ ಸಮಾಜದ ವತಿಯಿಂದ 49ನೇ ವರ್ಷದ ಶ್ರೀ ಗಣೇಶೋತ್ಸವವನ್ನು ಆಚರಿಸಲಾಯಿತು.

ಸಮಾಜದ ಅಧ್ಯಕ್ಷರಾದ ಶ್ರೀಮತಿ ಅಮಿತಾ ಡಾ. ವೇಣುಗೋಪಾಲ್ ಪೈ, ಮಾಜಿ ಅಧ್ಯಕ್ಷ ಗಣೇಶ್ ಶೆಣೈ, ಉಪಾಧ್ಯಕ್ಷರಾದ ನಿತ್ಯಾನಂದ ಕಾಮತ್, ಪ್ರಧಾನ ಕಾರ್ಯದರ್ಶಿ ಕೆ. ವೆಂಕಟರಮಣ ಭಟ್, ಖಜಾಂಚಿ ಆರ್.ವಿ.ಶೆಣೈ, ಸಹ ಕಾರ್ಯದರ್ಶಿ ಕಿರಣ್‌ಕುಮಾರ್ ಶೆಣೈ, ಸದಸ್ಯರಾದ ರಾಘವೇಂದ್ರ ಕಾಮತ್, ಕೀರ್ತಿ ಕಿಣಿ, ಗಣೇಶ ಜಿ.ತಿಳ್ವೆ, ರೇಖಾ ಡಿ.ಪ್ರಭು, ಉಷಾ ವಾಲಾವಾಲ್ಕರ್ ಮುಂತಾದವರು ಉಪಸ್ಥಿತರಿದ್ದರು.

## ಈದ್ ಮಿಲಾದ್ ಸೌಹಾರ್ದತೆಯ ಪ್ರತೀಕ



ಜಗಳೂರು, ಸೆ.16- ಪ್ರವಾದಿ ಮಹಮ್ಮದ್ ಪೈಗಂಬರ್ ಜನ್ಮದಿನವಾದ ಇಂದು ಈದ್ ಮಿಲಾದ್ ಹಬ್ಬವು ಸಾಮರಸ್ಯ, ಸೌಹಾರ್ದತೆಯ ಪ್ರತೀಕವಾಗಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಮಹಾತ್ಮಗಾಂಧಿ ವೃತ್ತದ ಬಳಿ ಈದ್ ಮಿಲಾದ್ ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಹಮ್ಮದ್ ಪೈಗಂಬರ್ ಅವರ ಸಂದೇಶಗಳು ಸಮಾಜಕ್ಕೆ ಆದರ್ಶಗಳು. ಧರ್ಮಾತೀತವಾಗಿ ಧಾರ್ಮಿಕ ವಿಚಾರಗಳ ಸಂವಹನ, ಸಮಾಲೋಚನೆಗಳು ಹಬ್ಬಗಳು ಸಂಭ್ರಮದ ಸೆಲೆಯಾಗಬೇಕು. ವಿಶ್ವದಲ್ಲಿ ಶಾಂತಿ ನೆಲಸಬೇಕು ಎಂದು ತಿಳಿಸಿದರು.

ಪಟ್ಟಣದ ಭುವನೇಶ್ವರಿ, ಮಹಾತ್ಮಗಾಂಧಿ ವೃತ್ತಗಳ ಮೂಲಕ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಮೂಲಕ ಖುರಾನ್ ಪಠಣದೊಂದಿಗೆ ಈದ್ ಮಿಲಾದ್ ಸಂಭ್ರಮದಿಂದ ಆಚರಿಸಲಾಯಿತು.

**ಜಗಳೂರಿನ ಈದ್ ಕಾರ್ಯಕ್ರಮದಲ್ಲಿ ಶಾಸಕ ದೇವೇಂದ್ರಪ್ಪ**

ಈ ಸಂದರ್ಭದಲ್ಲಿ ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಮುಖಂಡರಾದ ಬಿ.ಮಹೇಶ್ವರಪ್ಪ, ಮಸ್ಜಿದ್ - ಏ ಇಮಾಮ್ ಅಹಮದ್ ರಜಾ ಮಸೀದಿಯ ಅಧ್ಯಕ್ಷ ಶಫಿವುಲ್ಲಾ ಖಾನ್, ಧರ್ಮ ಗುರು ಅರ್ಫಾತ್ ಮೌಲಾನ, ಎಸ್ . ಎಸ್.ಎಫ್. ತಾಲೂಕು ಅಧ್ಯಕ್ಷ ನಿಜಾಮ್ ಖಾನ್, ಮಸೀದಿ ಕಮಿಟಿ ಮುಖ್ಯಸ್ಥರಾದ ಮಹಮ್ಮದ್ ಗಜಾಲಿ, ನಜರ್ ಉಲ್ಲಾಖಾನ್, ಕಲಂದರ್ ಹಜರತ್, ಷಂಷೀರ್ ಅಹಮದ್, ಶಕೀಲ್ ಅಹಮದ್, ಇಮ್ತಿಯಾಸ್, ಸಾಧಿಕ್, ಇರ್ಫಾನ್, ಸಮಿಉಲ್ಲಾ.ಎಸ್., ದಾದಾಪೀರ್ ಕೌಸರ್ ಹಾಗೂ ಮಸೀದಿ ಕಮಿಟಿ ಸದಸ್ಯರು ಇದ್ದರು.

## ಚನ್ನಗಿರಿಯಲ್ಲಿ ಲೋಕಾಯುಕ್ತರಿಂದ ಅಹವಾಲು

ಚನ್ನಗಿರಿಯ ಪ್ರವಾಸಿ ಮಂದಿರದಲ್ಲಿ ಇಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1.30ರ ವರೆಗೆ ದಾವಣಗೆರೆ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಾದ ಎಂ.ಎಸ್ ಕೌಲಾಪೂರೆ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವರು.


## ಅಖುರಥ ಫ್ರೆಂಡ್ಸ್ ಗ್ರೂಪ್‌ನಿಂದ ಕೊಲ್ಕತ್ತಾ ಶೈಲಿ ಗಣಪ



ದಾವಣಗೆರೆ, ಸೆ.16- ನಗರದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್‌ನಲ್ಲಿ ಅಖುರಥ ಫ್ರೆಂಡ್ಸ್ ಗ್ರೂಪ್ ವತಿಯಿಂದ ಕೊಲ್ಕತ್ತಾ ಶೈಲಿಯ ಶ್ರೀ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ.

ಆದರ್ಶ ಯೋಗ ಪ್ರತಿಷ್ಠಾನ ಶ್ರೀ ಮಹಮ್ಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದ ವತಿಯಿಂದ ವಿಶೇಷ ಪೂಜೆಯನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಅಂತರವಳ್ಳಿ ಆರ್. ಮುರಳೀಧರ ಆಚಾರ್, ಯೋಗತಜ್ಞ ರಾಘವೇಂದ್ರ ಗುರೂಜಿ, ಶ್ರೀಮತಿ ಸಂಧ್ಯಾ ಪೂಜಾ ಕಾರ್ಯ ನೆರವೇರಿಸಿದರು.

ಶ್ರೀಮತಿ ಆಶಾ ಪ್ರದೀಪ್ ಶ್ರೀ ಗಣೇಶನ ಭಜನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಅಖುರಥ ಫ್ರೆಂಡ್ಸ್ ಗ್ರೂಪ್‌ನ ಅಧ್ಯಕ್ಷ ಸಿ.ಪಿ ವರುಣ್ ಹಾಗೂ ಸದಸ್ಯರು ಉಪಸ್ಥಿತರಿದ್ದರು.



# ಹರಿಹರದಲ್ಲಿ 'ಇಂಜಿನಿಯರ್ಸ್‌ಡೇ' ಸರ್ ಎಂ.ವಿ. ಭಾವಚಿತ್ರದ ಮೆರವಣಿಗೆ



ಹರಿಹರ,ಸೆ.16- ನಗರದ ವೃತ್ತಿನಿರತ ಸಿವಿಲ್ ಇಂಜಿನಿಯರ್ಸ್ ಅಸೋಸಿಯೇಷನ್ ವತಿಯಿಂದ ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯನವರ 164 ಜನ್ಮದಿನದ ಅಂಗವಾಗಿ ಇಂಜಿನಿಯರ್ಸ್ ಡೇ ಆಚರಿಸಲಾಯಿತು.

ನಗರದ ಪ್ರಮುಖ ಬೀದಿಗಳಲ್ಲಿ ವಿಶ್ವೇಶ್ವರಯ್ಯನವರ ಭಾವಚಿತ್ರದ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯಲ್ಲಿ ಡೊಳ್ಳು, ಡ್ರಮ್ ಸೆಟ್, ಮತ್ತಿತರೆ ಕಲಾ ಮೇಳಗಳು ಭಾಗವಹಿಸಿದ್ದವು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡ ಸಿ.ಎನ್. ಹುಲಗೇಶ್, ವೃತ್ತಿನಿರತ ಇಂಜಿನಿಯರ್ಸ್ ಅಸೋಸಿಯೇಷನ್ ಅಧ್ಯಕ್ಷ ಜಿ.ಪಿ. ನಾಗರಾಜ್, ಉಪಾಧ್ಯಕ್ಷ ವಿಜಯಕುಮಾರ್ ಹುಲ್ಮನಿ, ಕಾರ್ಯದರ್ಶಿ ಕೆ.ಬಿ. ರಾಜಶೇಖರ್, ಸಹ ಕಾರ್ಯದರ್ಶಿ ಬಿ.ಎಂ ವಿಶ್ವನಾಥ, ಖಜಾಂಚಿ ಪರಮೇಶ್ವರಪ್ಪ ಎನ್.ಪಿ, ನಿರ್ದೇಶಕರಾದ ಶಿವಪ್ರಕಾಶ್ ಶಾಸ್ತ್ರಿ, ಎಂ. ಗುರುನಾಥ್, ಡೆನ್ನಿಸ್ ರೋಚ್, ಆರ್. ಎಸ್. ರವೀಂದ್ರನಾಥ್, ಸದಸ್ಯರಾದ ಪ್ರಕಾಶ್ ಕೋಳೂರು, ಶಿವಯೋಗಿಸ್ವಾಮಿ, ಧರ್ಮಪ್ರಕಾಶ್, ಎಂ.ಇ. ನರೇಶ್, ರಮೇಶ್ ಜಿ. ಕಲಾಲ್, ಹರೀಶ್ ಎಂ ಕರಡಿ, ಇಂದ್ರಜಿತ್, ಮಯೂರ್ ಮಂಜುನಾಥ್, ವಾಮನ ಕುಲಕರ್ಣಿ, ಹರೀಶ್, ವೀರೇಶ್, ರೆಹೆಮಾನ್ ಖಾನ್, ಕಿರಣ್ ಲದ್ವಾ, ಅನೀಶ್ ಚಂದ್ರ, ಪ್ರವೀಣ್, ಪವನ್, ಕೃಷ್ಣ ಕಠಾರೆ, ದರ್ಶನ, ವಿನಯ ಎಂ ವಾಗೀಶಮಠ್, ಅರುಣ್, ರಾಜು ಹಣಗಿ, ಮಂಜುನಾಥ್, ಸುಹಾಸ್ ಇತರರು ಹಾಜರಿದ್ದರು.

# ನಗರದಲ್ಲಿ ಸಿ.ಬಿ.ಎಸ್.ಇ. ದಕ್ಷಿಣ ವಲಯ ಈಜು ಕ್ರೀಡಾಕೂಟ




## ಬೆಂಗಳೂರು ರಾಷ್ಟ್ರೋತ್ಥಾನ ಶಾಲೆಗೆ ಸಮಗ್ರ ಪ್ರಶಸ್ತಿ

ದಾವಣಗೆರೆ, ಸೆ. 16 - ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರವು, ಇಲ್ಲಿನ ಹೊರವಲಯದ ತೋಳಹುಣಸೆಯಲ್ಲಿ ಆಯೋಜಿಸಿದ್ದ ಸಿ.ಬಿ.ಎಸ್.ಇ ದಕ್ಷಿಣ ವಲಯ-2ರ ಈಜು ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

ತೋಳಹುಣಸೆಯ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಆಂಗ್ಲ ಮಾಧ್ಯಮ ವಸತಿಯುತ ಶಾಲೆಯಿಂದ ಸೆ.9ರಿಂದ ನಾಲ್ಕು ದಿನಗಳ ಕಾಲ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ 278 ಅಂಕಗಳನ್ನು ಪಡೆದು ಸಮಗ್ರ ಪ್ರಶಸ್ತಿ ಪಡೆದುಕೊಂಡಿತು.

ಕೇರಳದ ಎರ್ನಾಕುಲಂನ ವಿಶ್ವಜ್ಯೋತಿ ಪಬ್ಲಿಕ್ ಸ್ಕೂಲ್ 265 ಅಂಕದೊಂದಿಗೆ ದ್ವಿತೀಯ ಹಾಗೂ ಬೆಂಗಳೂರಿನ ಕೋಣನಕುಂಟೆಯ ದೆಹಲಿ ಪಬ್ಲಿಕ್ ಶಾಲೆಯು 191 ಅಂಕಗಳೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿತು.

11, 14. 17 ಮತ್ತು 19 ವರ್ಷದೊಳಗಿನ ಬಾಲಕ-ಬಾಲಕಿಯರ ವಿಭಾಗಗಳಲ್ಲಿ ಈ ಸ್ಪರ್ಧೆ ಆಯೋಜಿಸಲಾಗಿತ್ತು. ಕರ್ನಾಟಕ ಸೇರಿ ಮಹಾರಾಷ್ಟ್ರ, ಕೇರಳ, ಗೋವಾ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ಡಿಯು ಡಾಮನ್‌ನ 578 ಸಿಬಿಎಸ್‌ಇ ಶಾಲೆಗಳ 1500ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ವೈಯಕ್ತಿಕ ಬಹುಮಾನ:** 11 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಂಗಳೂರಿನ ಪ್ರೆಸಿಡೆನ್ಸಿ ಶಾಲೆಯ ಜ್ಞೋರ್ನಾ ಸಿಸೋಡಿಯಾ, ಬಾಲಕರ ವಿಭಾಗದಲ್ಲಿ ಮೈಸೂರಿನ ಸೇಂಟ್‌ಥಾಮಸ್ ಶಾಲೆಯ ಎಸ್. ರುಥ್ವಾ, 14 ವರ್ಷದೊಳಗಿನ ಬಾಲಕರಲ್ಲಿ ಜೈನ್ ಹೆರಿಟೇಜ್ ಶಾಲೆಯ ಎಸ್. ಶರಣ್, ಶ್ರೀ ಕುಮಾರನ್ ಶಾಲೆಯ ಅದ್ವೈತ ವಂಕಟ ಮಧಿರ, ಬಾಲಕಿಯರ ವಿಭಾಗದಲ್ಲಿ ವ್ಯಾಸ ಇಂಟರ್‌ನ್ಯಾಷನಲ್ ಶಾಲೆಯ ತ್ರಿಶಾ ಸಿಂಧು, 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಶ್ರೀ ಕುಮಾರನ್ ಶಾಲೆಯ ಅಂಜಲಿ ಅರುಣ್ ಹೊಸಕೆರೆ, ಬಾಲಕರ ವಿಭಾಗದಲ್ಲಿ ಹೆಬ್ಬಾಳ್ ಏರ್‌ಫೋರ್ಸ್ ಶಾಲೆಯ ಸಾಯೀಶ್ ಕಿಣಿ, 19 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಂಗಳೂರಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಎಸ್. ರಾಜುಲಾ, ಬಾಲಕರ ವಿಭಾಗದಲ್ಲಿ ವಿಶ್ವಜ್ಯೋತಿ ಪಬ್ಲಿಕ್ ಶಾಲೆಯ ಜೋಸೆಫ್ ವಿ. ಜೋಸೆ, ದೆಹಲಿ ಪಬ್ಲಿಕ್ ಶಾಲೆಯ ಸೋಹಂ ಮಂಡಲ್ ವೈಯಕ್ತಿಕ ಬಹುಮಾನ ಪಡೆದರು.

ಸಮಾರೋಪ ಸಮಾರಂಭದಲ್ಲಿ ಶಾಲೆಯ ಮುಖ್ಯಸ್ಥ ಮಂಜುನಾಥ ರಂಗರಾಜು ಬಹುಮಾನ ವಿತರಿಸಿ ಮಾತನಾಡಿ, ಇದೇ ತಿಂಗಳಲ್ಲಿ ಎಸ್.ಎಸ್. ಎನ್.ಪಿ.ಎಸ್ ಶಾಲೆ ಆವರಣದಲ್ಲಿ ಸಿಬಿಎಸ್‌ಇ ಶಾಲಾ ಬಾಲಕರ ಕಬಡ್ಡಿ ಕ್ರೀಡಾಕೂಟ ಹಾಗೂ ಶಿವಗಂಗೋತ್ರಿಯ ಪಿ.ಎಸ್.ಎಸ್.ಇ.ಎಂ.ಆರ್ ಶಾಲೆಯ ಆವರಣದಲ್ಲಿ ಸಿಬಿಎಸ್‌ಇ ಕ್ಲಸ್ಟರ್ 7 ಅಥ್ಲೆಟಿಕ್ಸ್ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ ಎಂದು ಪ್ರಕಟಿಸಿದರು.

ಲೇಖಕ ಎಂ.ಎನ್.ವಿಶ್ವನಾಥ, ಜೆ.ಜೆ.ಎಂ. ಕಾಲೇಜಿನ ಕ್ರೀಡಾ ವಿಭಾಗದ ಡಾ.ಗೋಪಾಲಕೃಷ್ಣ, ಮದ್ರಾಸ್ ಐಐಟಿಯ ಪೌಷ್ಟಿಕ ತಜ್ಞೆ ಗೀತಾಗಲಿಯವರ್, ಅಂತಾರಾಷ್ಟ್ರೀಯ ಪ್ಯಾರಾ ಒಲಿಂಪಿಕ್ ಈಜುಪಟು ಕೆ.ಎಸ್.ವಿಶ್ವಾಸ್ ಹಾಗೂ ಸಿಇಒ ಕಾರ್ತಿಕ್ ನಾಗಪುರಿ ವಿವಿಧ ವಿಚಾರಗಳ ಬಗ್ಗೆ ಮಾತನಾಡಿದರು.

ಲೇಖಕ ಎಂ.ಎನ್.ವಿಶ್ವನಾಥ, ಜೆ.ಜೆ.ಎಂ. ಕಾಲೇಜಿನ ಕ್ರೀಡಾ ವಿಭಾಗದ ಡಾ.ಗೋಪಾಲಕೃಷ್ಣ, ಮದ್ರಾಸ್ ಐಐಟಿಯ ಪೌಷ್ಟಿಕ ತಜ್ಞೆ ಗೀತಾಗಲಿಯವರ್, ಅಂತಾರಾಷ್ಟ್ರೀಯ ಪ್ಯಾರಾ ಒಲಿಂಪಿಕ್ ಈಜುಪಟು ಕೆ.ಎಸ್.ವಿಶ್ವಾಸ್ ಹಾಗೂ ಸಿಇಒ ಕಾರ್ತಿಕ್ ನಾಗಪುರಿ, ಸಿ.ಬಿ.ಎಸ್.ಇ ದಕ್ಷಿಣ ವಲಯ-2, ಈಜು ಕ್ರೀಡಾಕೂಟದ ವೀಕ್ಷಕ ಸಿದ್ದು ಕೆರೆಸೂರ್ ಇತರರಿದ್ದರು.

# ಕಲ್ಯಾಣದ ಅಭಿವೃದ್ಧಿ : ಇಂದಿನ ಸಂಪುಟದಲ್ಲಿ ತೀರ್ಮಾನ

**(1ನೇ ಪುಟದಿಂದ)** ಕ್ರಮಕ್ಕೆ ಸಂಪುಟ ಒಪ್ಪಿಗೆ ನೀಡಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಮುಡಾ ಮತ್ತು ವಾಲ್ಮೀಕಿ ಹಗರಣವನ್ನು ಪ್ರತಿಪಕ್ಷಗಳು ಮುಂದಿಟ್ಟುಕೊಂಡು ರಾಜಕೀಯ ಮಾಡುತ್ತಿವೆ. ಬಿಜೆಪಿ ಮತ್ತು ಜೆಡಿಎಸ್ ಅಧಿಕಾರದಲ್ಲಿ ಇದ್ದಾಗ ನಡೆದಿರುವ ಹಗರಣಗಳನ್ನು ಬಯಲಿಗೆಳೆಯಲು ಸರ್ಕಾರ ಮುಂದಾಗಿದೆ. ಇದರ ಮೊದಲ ಭಾಗವಾಗಿ ಕೆಲವು ಹಗರಣಗಳನ್ನು ಬಯಲು ಮಾಡಿ ಅದರಲ್ಲಿ ಪಾಲ್ಗೊಂಡಿರುವ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮಕ್ಕೆ ಹಸಿರು ನಿಶಾನೆ ತೋರಲೇಬೇಕೆಂದು ಮುಖ್ಯಮಂತ್ರಿ ಅವರು ಸಂಕಲ್ಪ ತೊಟ್ಟಿದ್ದಾರೆ.

ಸಂಪುಟದ ಉಪಸಮಿತಿ ನೀಡಿರುವ ವರದಿ ಬಗ್ಗೆ ಮುಖ್ಯಮಂತ್ರಿ ಅವರು ಕಾನೂನು ತಜ್ಞರೊಂದಿಗೆ ಈಗಾಗಲೇ ಸಮಾಲೋಚನೆ ನಡೆಸಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಲಬುರಗಿ ಸಂಪುಟ ಸಭೆಯಲ್ಲಿ ಭಾಗವಹಿಸಲು ತಮ್ಮ ಅಮೆರಿಕಾ ಪ್ರವಾಸ ಮೊಟಕುಗೊಳಿಸಿ ಹಿಂತಿರುಗಿದ್ದಾರೆ.

ಸಂಪುಟ ಸಭೆಯಲ್ಲಿ ತಪ್ಪದೆ ಹಾಜರಿರುವಂತೆ ಎಲ್ಲಾ ಸಂಪುಟ ಸಹೋದ್ಯೋಗಿಗಳಿಗೂ ಮುಖ್ಯಮಂತ್ರಿ ಸಂದೇಶ ರವಾನಿಸಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಕಲಬುರಗಿ ಜಿಲ್ಲಾ ಉಸ್ತುವಾರಿ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಸರ್ಕಾರಿ ಹುದ್ದೆಗಳ ಭರ್ತಿ ಮತ್ತು ನೀರಾವರಿ ಯೋಜನೆಗಳು ಸೇರಿದಂತೆ ಕೆಲವು ಪ್ರಮುಖ ವಿಷಯಗಳ ಬಗ್ಗೆ ಮಂಗಳವಾರ ನಡೆಯಲಿರುವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗುವುದು ಎಂದಿದ್ದಾರೆ.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಉದ್ದೇಶದ ಹಿನ್ನೆಲೆಯಲ್ಲಿ ಈ ಸಭೆ ನಡೆಯುತ್ತಿದ್ದು, ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳ ಸ್ಥಾಪನೆಗೆ ಒತ್ತು ನೀಡಲು ಸಂಪುಟ ಕೆಲವು ಮಹತ್ವದ ನಿರ್ಧಾರ ಕೈಗೊಳ್ಳಲಿದೆ ಎಂದರು.

# ಸೆ.17, ಹೈದರಾಬಾದ್ ಕರ್ನಾಟಕ ವಿಮೋಚನೆಯ ಹಬ್ಬ

ಭಾರತಕ್ಕೆ ಸ್ವಾತಂತ್ರ್ಯವು ಆಗಸ್ಟ್ 15, 1947ರಂದು ದೊರಕಿದರೆ, ಭಾರತದೊಳಗಿನ, ಕರ್ನಾಟಕದ ಹೈದರಾಬಾದ್ ಕರ್ನಾಟಕಕ್ಕೆ ಅಂದು ಸ್ವಾತಂತ್ರ್ಯ ದೊರಕಿರಲಿಲ್ಲ ಎನ್ನುವುದು ಅಚ್ಚರಿ ಯಾದರೂ ಸತ್ಯ. ಈಗಿನ ಕಲ್ಯಾಣ ಕರ್ನಾಟಕವು ನಿಜಾಮನ ಕಪಿಮುಷ್ಠಿಯಿಂದ ಬಿಡುಗಡೆಗೊಂಡಿರುವುದು ಸೆಪ್ಟೆಂಬರ್ 17, 1948 ರಂದು. ಅಂದರೆ ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ಒಂದು ವರ್ಷ ಮೂವತ್ತೆರಡು ದಿನಗಳ ಬಳಿಕ ಹೈದರಾಬಾದ್ ಕರ್ನಾಟಕ/ಕಲ್ಯಾಣ ಕರ್ನಾಟಕಕ್ಕೆ ಸ್ವಾತಂತ್ರ್ಯ ದೊರಕಿತು. ಹೀಗಾಗಿ, ಈ ವಿಮೋಚನಾ ದಿನವು ಕಲ್ಯಾಣ ಕರ್ನಾಟಕಕ್ಕೆ ಸ್ವಾತಂತ್ರ್ಯ ದಿನವೂ ಹೌದು.

ಇಂದು ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟ ಕರ್ನಾಟಕ ಮತ್ತು ಆಂಧ್ರ, ಮಹಾರಾಷ್ಟ್ರದ ಕೆಲವು ಪ್ರದೇಶಗಳಿಗೆ ಸ್ವಾತಂತ್ರ್ಯ ದೊರಕಿದ ದಿನವಾಗಿದೆ. ಬ್ರಿಟಿಷರು ಆಗಸ್ಟ್ 15ಕ್ಕೆ ಭಾರತ ಬಿಟ್ಟು ತೊಲಗಿದರೂ, ಹೈದರಾಬಾದ್ ರಾಜ್ಯದ ನಿಜಾಮನಾದ ಮೀರ್ ಉಸ್ಮಾನ್ ಅಲಿ ಮಾತ್ರ ಭಾರತದ ಒಕ್ಕೂಟದಲ್ಲಿ ವಿಲೀನವಾಗಲು ಒಪ್ಪಿರಲಿಲ್ಲ. ಇದಕ್ಕಾಗಿ ಮತ್ತೊಂದು ಹೋರಾಟವೇ ನಡೆಯಬೇಕಾಯಿತು.

ಭಾರತದ ಒಕ್ಕೂಟದ ಭಾಗವಾಗಲು ಒಪ್ಪದ ನಿಜಾಮರ ವಿರುದ್ಧದ ಹೋರಾಟದಲ್ಲಿ ನೂರಾರು ಹೋರಾಟಗಾರರು ಪ್ರಾಣ ಕಳೆದುಕೊಂಡರು. ನಿಜಾಮನ ವಿರುದ್ಧ ಜನರು ದಂಗೆ ಎದ್ದಾಗ ನಿಜಾಮನ ಸೇನಾನಿ ಖಾಸಿಂ ರಜ್ವಿಯು ತನ್ನ ರಜಾಕಾರ್ ಸಂಘಟನೆಯ ಮೂಲಕ ಜನರ ಹತ್ಯೆ ಮಾಡಲಾರಂಭಿಸಿದ. ಕೊಲೆ, ಲೂಟಿ, ಅತ್ಯಾಚಾರಗಳು ಮೇರೆ ಮೀರಿದವು. ನಿಜಾಮರ ವಿರುದ್ಧ, ರಜಾಕಾರಾರ ವಿರುದ್ಧ ಹಳ್ಳಿಹಳ್ಳಿಗಳಲ್ಲಿ ಜನರು ದಂಗೆ ಎದ್ದರು. ಆದರೆ, ಅಂದಿನ ಕಾಂಗ್ರೆಸ್ ಅಧ್ಯಕ್ಷರಾದ ಸ್ವಾಮಿ ರಮಾನಂದತೀರ್ಥರ ನೇತೃತ್ವದಲ್ಲಿ 'ಮಾಡು ಇಲ್ಲವೇ ಮಡಿ' ಎನ್ನುವ ಸಂದೇಶದೊಂದಿಗೆ ವಿಲೀನ ಚಳುವಳಿಯ ಕಿಡಿ ಹೊತ್ತಿತು. ಆಗಲೇ ರಜಾಕಾರರ ಹಾವಳಿ ಮತ್ತು ಕೋಮುಗಲಭೆಗಳ ಪ್ರಭಾವದಿಂದ ಈ ಭಾಗದಲ್ಲಿ ಅಪಾರ ಪ್ರಮಾಣದ ಆಸ್ತಿಪಾಸ್ತಿಗಳ ಲೂಟಿ ಮತ್ತು ಪ್ರಾಣ ಹಾನಿಗಳು ನಡೆದು ಹೋಗಿದ್ದವು. ಅಂದಿನ ಉಪಪ್ರಧಾನಿ ಸರ್ದಾರ್ ವಲ್ಲಭಭಾಯಿ ಪಟೇಲರು 13-ಸಪ್ಟೆಂಬರ್-1948 ರಂದು ವಿಲೀನ ಪ್ರಕ್ರಿಯೆಗೆ ಒಪ್ಪಲಾರದ ಹೈದರಾಬಾದ್ ಸಂಸ್ಥಾನದ ವಿರುದ್ಧ ಐತಿಹಾಸಿಕ ಪೊಲೀಸ್ ಕಾರ್ಯಾಚರಣೆಗೆ ಆಜ್ಞೆ ಮಾಡಿದರು. ಭಾರತೀಯ ಸೇನಾಧಿಕಾರಿ ಜನರಲ್ ಚೌಧರಿ ಯವರ ನಾಯಕತ್ವದಲ್ಲಿ ಹೈದರಾಬಾದ್ ಸಂಸ್ಥಾನದ ಮೇಲೆ ಎಂಟು ದಿಕ್ಕುಗಳಿಂದ ದಾಳಿ ನಡೆಸಲಾಯಿತು. ಕೊನೆಗೆ ಹೈದರಾಬಾದ್ ನಿಜಾಮನು 18- 9-1948 ರಂದು ಶರಣಾಗತನಾಗಿ ಭಾರತ ಒಕ್ಕೂಟಕ್ಕೆ ಹೈದರಾಬಾದ ಪ್ರಾಂತವನ್ನು ಸೇರಿಸುವ ಪತ್ರಕ್ಕೆ ಸಹಿ ಹಾಕಿದನು. ಕಾಶಿಮ್ ರಜ್ವಿ ತಲೆತಪ್ಪಿಸಿಕೊಂಡು ಭಾರತ ವಿಭಜನೆಯಿಂದ ಸೃಷ್ಟಿಯಾದ ಪಾಕಿಸ್ತಾನ ಸೇರಿದನು.

ಈ ಐತಿಹಾಸಿಕ ಘಟನೆಯ ನೆನಪಿನಲ್ಲಿ ಇತ್ತೀಚೆಗೆ ಪ್ರತಿವರ್ಷ ಸಪ್ಟೆಂಬರ್ 17ನ್ನು 'ಹೈದರಾಬಾದ ಕರ್ನಾಟಕ ವಿಮೋಚನಾ ದಿನ' ಎಂದು ಆಚರಿಸಲಾಗುತ್ತದೆ. ಕಲಬುರ್ಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳು ಅಂದಿನ ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿದ್ದವು. ಆಡಳಿತದ ಅನುಕೂಲಕ್ಕಾಗಿ ಬಳ್ಳಾರಿಯನ್ನು ಕೂಡ ಈಗ ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿಯೇ ಗುರುತಿಸಲಾಗುತ್ತಿದೆ. ಮತ್ತು ಈಗ ಈ ಭಾಗವನ್ನು 'ಕಲ್ಯಾಣ ಕರ್ನಾಟಕ' ಎಂದು ಹೆಸರಿಸಲಾಗಿದೆ. ಆದರೆ ಈ ದಿನವನ್ನು 'ವಿಮೋಚನಾ ದಿನಾಚರಣೆ' ಅಥವಾ 'ವಿಲೀನ ದಿನಾಚರಣೆ' ಯಾವ ಹೆಸರಿನಿಂದ ಗುರುತಿಸಬೇಕು ಎಂಬ ದ್ವಂದ್ವ ಇನ್ನೂ ಜೀವಂತ ವಾಗಿದೆ. ಈ ಭಾಗದ ಜನರಿಗೆ ಇದು ನಿಜಾಮನ ಕಪಿಮುಷ್ಠಿಯಿಂದ ಬಿಡಿಸಿಕೊಂಡ ವಿಮೋಚನೆಯ ದಿನ ಎಂಬ ಸಂತೋಷವಿದೆ. ಆದರೆ, ಭಾರತದ ರಾಷ್ಟ್ರೀಯ ಒಕ್ಕೂಟದ ವಿಷಯದಲ್ಲಿ ನೋಡಿದರೆ ಇದು ವಿಲೀನ ದಿನವೇ ಹೌದು. ಹೈದರಾಬಾದ್ ಸಂಸ್ಥಾನದ ಸಾಮಾನ್ಯ ಪ್ರಜೆಗಳು ನಿಜಾಮಶಾಹಿಯ ಅಸಫಜಾಹ ಧ್ವಜವನ್ನು ಕಳಚಿ ತ್ರಿವರ್ಣ ಧ್ವಜವನ್ನು ಅಂಗೀಕರಿಸಿದ್ದಾರೆ. ಮತ್ತು ಅಲ್ಲಿನ ಸೇನೆ, ಕರೆನ್ಸಿಯನ್ನು ತೆಗೆದುಹಾಕಿ ಭಾರತ ಸರಕಾರದ ರೂಪಾಯಿಯನ್ನು ಸ್ವೀಕರಿಸಿ ಭಾರತೀಯತೆಯ ಚಿಹ್ನೆಗಳಿಗೆ ಅರ್ಪಿಸಿಕೊಂಡದ್ದು ಇದೇ ದಿನ.ಆದ್ದರಿಂದ ಇಂದು ಈ ಭಾಗದ ಜನರು ಭಾರತದಲ್ಲಿ ನಿಜವಾಗಿ ಒಂದುಗೂಡಿದ ದಿನವಾಗಿದೆ.ಈ ಕಾರಣಕ್ಕಾಗಿ ಸಪ್ಟೆಂಬರ್ ಹದಿನೇಳನ್ನು ಹೈದರಾಬಾದ್-ಕರ್ನಾಟಕದ 'ವಿಲೀನ ದಿನ' ವೆಂದು ಆಚರಿಸುವುದೇ ಸರಿಯಾದ ಪರಿಪಾಠ ಆಗಬಹುದು.



- ಬಸವರಾಜ ಕರುವಿನ, ಬಸವನಾಳು.

# ಕಮ್ಯುನಿಸ್ಟ್ ಪಕ್ಷಕ್ಕೆ ತುಂಬಲಾರದ ನಷ್ಟ

## ಜಗಳೂರಿನಲ್ಲಿ ಯೆಚೂರಿ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ನ್ಯಾಯವಾದಿ ಟಿ.ಬಸವರಾಜ್



ಜಗಳೂರು, ಸೆ. 14- ಪಟ್ಟಣದ ಅಂಬೇಡ್ಕರ್ ವೃತ್ತದಲ್ಲಿ ಪ್ರಗತಿಪರ ಸಂಘಟನೆಗಳ ವತಿಯಿಂದ ಮೊನ್ನೆ ನಿಧನರಾದ ಮಾಜಿ ಸಂಸದ, ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಸೀತಾರಾಂ ಯೆಚೂರಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ವಕೀಲರ ಸಂಘದ ಟಿ. ಬಸವರಾಜ್ ಮಾತನಾಡಿ, ಯೆಚೂರಿರವರು ದೇಶದ ಕಾರ್ಮಿಕರು, ಬಡ ವರ್ಗ ಮತ್ತು ಶೋಷಿತ ವರ್ಗಗಳ ಧ್ವನಿಯಾಗಿದ್ದರು. ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸುವಲ್ಲಿ ಅಪಾರವಾಗಿ ಶ್ರಮಿಸಿದ್ದರು. ಅವರ ಅಗಲಿಕೆ ಕಮ್ಯುನಿಸ್ಟ್ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ ಎಂದರು.

ವಿದ್ಯಾರ್ಥಿ ದೆಸೆಯಿಂದಲೇ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷ, ಜಾತ್ಯಾತೀತ, ಸಂವಿಧಾನದ ಆಶಯಗಳನ್ನು ಸಮಾಜದಲ್ಲಿ ಸಾಕಾರಗೊಳಿಸಲು ಹೋರಾಟ ನಡೆಸಿ ಸರಳ ಜೀವನ ಸಾಗಿಸಿದರು. ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಿದ್ದರು ಎಂದು ಅವರು ಹೇಳಿದರು.

ಪ್ರಾಂಶುಪಾಲ ನಾಗಲಿಂಗಪ್ಪ ಮಾತನಾಡಿ, ಎಡಪಂಥೀಯ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದ ಸೀತಾರಾಂ ಅವರ ನಿಧನದಿಂದ ಎಡಪಂಥೀಯ ಹೋರಾಟಕ್ಕೆ ಹಿನ್ನೆಡೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಉಪನ್ಯಾಸಕ ನಾಗರಾಜ್, ಸತೀಶ್ ಮಲೆಮಾಚಿಕೆರೆ, ಮಾದಿಹಳ್ಳಿ ಮಂಜಪ್ಪ, ಅನಂತರಾಜ್, ಮಂಜಣ್ಣ.ಓ, ಧನ್ಯಕುಮಾರ್, ಪವನ್ ಗ್ಯಾಸ್ ಮಾಲೀಕ ಓಬಣ್ಣ, ರಾಜಪ್ಪ ವ್ಯಾಸಗೊಂಡನಹಳ್ಳಿ, ವಕೀಲರಾದ ನಾಗೇಶ್, ಅಂಜಿನಪ್ಪ, ಸಣ್ಣ ಓಬಯ್ಯ ಇದ್ದರು.

# ಪಂಚಾಯ್ತಿ ಚುನಾವಣೆ ನಡೆಸಲು ಹೆಚ್ಡಿಕೆ ಆಗ್ರಹ

**(1ನೇ ಪುಟದಿಂದ)** ಆಗ್ರಹಿಸಿದ್ದಾರೆ. ನೀವು ಅಧಿಕಾರಕ್ಕೆ ಬಂದು ವರ್ಷದ ಮೇಲೆ ನಾಲ್ಕು ತಿಂಗಳು ಕಳೆಯಿತು, ಈವರೆಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ನಿಮ್ಮಿಂದ ಸಾಧ್ಯವಾಗಿಲ್ಲ.

ಅಧಿಕಾರದ ನಿಮ್ಮ ದಾಹ ಸ್ಥಳೀಯ ಸಂಸ್ಥೆಗಳ ಕತ್ತು ಹಿಸುಕುವ ಕೆಲಸ ಮಾಡಿದೆ, ನಿಮ್ಮ ಪ್ರಜಾಪ್ರಭುತ್ವದ ಜನಪರತೆ ಜಾಹೀರಾತುಗಳಲ್ಲಷ್ಟೇ ಝಗಮಗಿಸುತ್ತಿದೆ ಎಂದು ಟ್ವೀಟ್ ಮಾಡಿ ಕಿಡಿ ಕಾರಿದ್ದಾರೆ.

ಮಾನವ ಸರಪಳಿ ನೆಪದಲ್ಲಿ ಪುಕ್ಕಟೆ ಪ್ರಚಾರ ಗಿಟ್ಟಿಸಿಕೊಳ್ಳುವ ಕೆಲಸ ಮಾಡಿದ್ದೀರಿ, ಆದರೆ, ನೈಜವಾಗಿ ಪ್ರಜಾಪ್ರಭುತ್ವ ಉಳಿಸುವ ಕೆಲಸ ಮಾಡುತ್ತಿಲ್ಲ ಎಂದೂ ಅವರು ಹೇಳಿದ್ದಾರೆ.

# ಟ್ರಂಪ್ ಹತ್ಯೆಗೆ ಮತ್ತೊಂದು ಯತ್ನ

**(1ನೇ ಪುಟದಿಂದ)** ಕ್ಲಬ್‌ನಲ್ಲಿ ಈ ಘಟನೆ ನಡೆದಿದೆ. ಗಾಲ್ಫ್ ಕ್ಲಬ್‌ನ ಆಸ್ತಿ ಬಳಿ ಇದ್ದ ಬಂದೂಕುಧಾರಿಯ ಕಡೆ ಗುಪ್ತಚರ ದಳದ ಏಜೆಂಟರು ಗುಂಡು ಹಾರಿಸಿದ್ದಾರೆ. ನಂತರ ಆತನನ್ನು ವಶಕ್ಕೆ ಪಡೆಯಲಾಗಿದೆ.

ಈ ಸಮಯದಲ್ಲಿ ಟ್ರಂಫ್ ಗಾಲ್ಫ್ ಆಡುತ್ತಿದ್ದರು. ಅವರು ಅಪಾಯದಿಂದ ಪಾರಾಗಿದ್ದಾರೆ.

ಶಂಕಿತ ವ್ಯಕ್ತಿಯೋರ್ವ ಗಾಲ್ಫ್ ತಾಣದ ಬೇಲಿಯ ಬಳಿ ರೈಫಲ್ ಹಿಡಿದು ನಿಂತಿದ್ದು ಪತ್ತೆಯಾಯಿತು. ಆತನಿಂದ ಟ್ರಂಪ್ ಸುಮಾರು 300ರಿಂದ 500 ಮೀಟರ್ ದೂರದಲ್ಲಿದ್ದರು.

ಭದ್ರತಾ ಸಿಬ್ಬಂದಿ ತಕ್ಷಣವೇ ಆತನ ಕಡೆ ಗುಂಡು ಹಾರಿಸಿದರು. ಆತ ತಪ್ಪಿಸಿಕೊಳ್ಳಲು ಪ್ರಯತ್ನ ನಡೆಸಿದ. ನಂತರ ಆತನನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ. ಬಂಧಿತನನ್ನು ಹವಾಯಿಯ ಸಣ್ಣ ನಿರ್ಮಾಣ ಕಂಪನಿಯ ಮಾಲೀಕ ರಾನ್ ವೆಸ್ಲಿ ರೌತ್ ಎಂದು ಗುರುತಿಸಲಾಗಿದೆ. ರೌತ್ ಈ ಹಿಂದೆ ಹಲವು ಬಾರಿ ಟ್ರಂಪ್ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದ.

ಕಳೆದ ಜುಲೈ ತಿಂಗಳಲ್ಲಿ ಪೆನ್ಸಿಲ್ವೇನಿಯಾದಲ್ಲಿ ಟ್ರಂಪ್ ಸಭೆಯೊಂದನ್ನು ನಡೆಸುವಾಗ ಅವರ ಮೇಲೆ ಗುಂಡು ಹಾರಿಸಲಾಗಿತ್ತು. ಆಗ ಅವರ ಬಲಕಿವಿಗೆ ಗಾಯಗಳಾಗಿದ್ದವು.

ರೌತ್ ವಿರುದ್ಧ ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಹಲವಾರು ಅಪರಾಧ ಪ್ರಕರಣಗಳು ದಾಖಲಾಗಿವೆ. ಹಲವು ಬಾರಿ ಆತ ರಾಜಕೀಯ ಸಂಬಂಧದ ಹೇಳಿಕೆಗಳನ್ನೂ ನೀಡಿದ್ದ. ಟ್ರಂಪ್ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದ. ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಅವರು ರಾಜಕೀಯ ಹಿಂಸಾಚಾರವನ್ನು ಖಂಡಿಸಿದ್ದಾರೆ. ಘಟನೆಯ ಬಗ್ಗೆ ಅಧ್ಯಕ್ಷ ಬಿಡೆನ್ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರಿಬ್ಬರಿಗೂ ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ವಂದೇ ಭಾರತ್ ಮೆಟ್ರೋಗೆ ಚಾಲನೆ

**(1ನೇ ಪುಟದಿಂದ)** ಹಾಗೂ ಉದ್ಘಾಟನೆ ನೆರವೇರಿಸಿದ್ದಾರೆ. ಇದಕ್ಕೂ ಮುಂಚೆ ಪ್ರಧಾನಿ ಮೋದಿ ಅವರು ಪಿಎಂ ಸೂರ್ಯಘರ್ ಸೌರ ವಿದ್ಯುತ್ ಯೋಜನೆಯ ಫಲಾನುಭವಿಗಳ ಜೊತೆ ಸಂವಾದ ನಡೆಸಿದರು.


**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಬೇಕಾಗಿದ್ದಾರೆ**
ಕಾಫೀ ಶಾಪ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿಯುಳ್ಳವರು ಸೂಕ್ತ ದಾಖಲೆಗಳೊಂದಿಗೆ ಪುರುಷ ಅಭ್ಯರ್ಥಿಗಳು ಮಾತ್ರ ನೇರವಾಗಿ ಸಂಪರ್ಕಿಸಿ :
ಎ.ಎಸ್.ಎಸ್. ಫುಡ್ಸ್
ಮಂಡಿಪೇಟೆ, ದಾವಣಗೆರೆ
94482 72734

**ರೂಂ ಬಾಡಿಗೆಗೆ ಇದೆ**
ದಾವಣಗೆರೆ ಮಹಾಲಕ್ಷ್ಮಿ ಬಡಾವಣೆಯಲ್ಲಿ ಸುಸಜ್ಜಿತವಾದ ದೊಡ್ಡ ರೂಂ ಬಾಡಿಗೆಗೆ ಇದೆ. ಮಹಿಳೆಯರಿಗೆ ಮಾತ್ರ. Call :
87489 47072

**ಸೈಟು ಮಾರಾಟಕ್ಕಿದೆ**
ದಾವಣಗೆರೆ ಸಬ್ ರಿಜಿಸ್ಟರ್ ಹತ್ತಿರ, ಅಶ್ವಿನಿ ಆಸ್ಪತ್ರೆ ಎದುರು, ಪಿ.ಬಿ. ರಸ್ತೆಯಿಂದ ಕುಂದುವಾಡ ರಸ್ತೆಗೆ ಹೋಗುವ 40 ಅಡಿ ರಸ್ತೆಗೆ ಪೂರ್ವ ದಿಕ್ಕಿನ 180x110x Sft ಇರುವ ಇಂಡಸ್ಟ್ರೀಯಲ್ ಖಾತಾ ಇರುವ ಹಾಲಿ ಬಾಡಿಗೆ ಬರುತ್ತಿರುವ, ಆಸ್ತಿ ಮಾರಾಟಕ್ಕಿದೆ. ಸಂಪರ್ಕಿಸಿ :
94481 80019, 98447 11299

**ಬಾಡಿಗೆಗೆ ಇದೆ**
2 ಬೆಡ್ ರೂಂ ಮನೆ ನಂ. 952, 2ನೇ ಮೇನ್, 3ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ.
76193 41017

**WANTED**
SALESMEN
South India Opticals
Near Ram And Co Circle, Beside Bank of Baroda, Davangere.
94481 91432

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ನೇರ ಸಂದರ್ಶನ**
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ಕ್ಯಾಷಿಯರ್ ಮಹಿಳೆಯರು ಎರಡು ಮೂರು ವರ್ಷ ಅನುಭವ, ಸರ್ವಿಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಮಹಿಳೆಯರು ಪಾರ್ಟ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಜೆ 6 ರಿಂದ ರಾತ್ರಿ 11ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
9448980070, 8884704025

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಿ. : 01.10.2024 to 08.10.2024ರ ವರೆಗೆ
7 ದಿನಗಳ ದಕ್ಷಿಣ ಭಾರತದ ಪ್ರವಾಸ ಮಧುರೈ, ಪಳನಿ, ರಾಮೇಶ್ವರ, ಕನ್ಯಾಕುಮಾರಿ
ಕೇವಲ 15 ಸೀಟುಗಳಿವೆ ಆಸಕ್ತಿಯುಳ್ಳವರು ಕರೆಮಾಡಿ.
90086 26473, 94485 33928

**ಮನೆಗಳು ಬಾಡಿಗೆ / ಲೀಸ್‌ಗಿವೆ**
2BHK ಆರ್ ಸಿ ಸಿ 2ನೇ ಮಹಡಿ ಲೀಸ್ 5 ಲಕ್ಷ, ಪೂರ್ವ ಬಾಗಿಲು, 2BHK ಆರ್.ಸಿ.ಸಿ. ಬಾಡಿಗೆ 5,500/-. ದೇವರಾಜ್ ಅರಸ್ ಬಡಾವಣೆ, ದಾವಣಗೆರೆ. ಬೋರ್ ವೆಲ್/ ಕಾರ್ಪೋರೇಷನ್ ನೀರು, ಕಾರ್ ಪಾರ್ಕಿಂಗ್ ಸೌಲಭ್ಯವಿದೆ. 1BHK ಆರ್.ಸಿ.ಸಿ. ನಿಟುವಳ್ಳಿ, ಲೆನಿನ್ ನಗರ, ಲೀಸ್ 2 ಲಕ್ಷ.
9741746205, 7349397287

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ (Nurse) ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಮನೆ ಬಾಡಿಗೆಗಿದೆ**
3378/313, 4ನೇ ಮೇನ್, 11ನೇ ಕ್ರಾಸ್, ಎಸ್.ಎಸ್. ಲೇಔಟ್, ಬಿ ಬ್ಲಾಕ್, ದಾವಣಗೆರೆ, 2ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ
90084 82412

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ.
ಬೈಕ್‌ವುಳ್ಳವರಿಗೆ ಮೊದಲ ಆದ್ಯತೆ.
94823 89317

**ಕಡಿಮೆ ಬೆಲೆಗೆ ಎನ್.ಎ. ಸೈಟುಗಳು ಮಾರಾಟಕ್ಕೆ ಇವೆ**
ಬಾಡಾ ಕ್ರಾಸ್ ಹತ್ತಿರ, 30x40 - 1200 Sqft ಉತ್ತಾರಾಭಿಮುಖ ಸೈಟುಗಳು.
80505 91277

**ಮನೆ ಮಾರಾಟಕ್ಕಿದೆ**
ಕುಂಬಳೂರು, ಹರಿಹರ ತಾ||, ಶಿವಮೊಗ್ಗ - ಹರಿಹರ ರಸ್ತೆ, ನಿಟ್ಟೂರು ಕ್ರಾಸ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಉತ್ತರ ದಿಕ್ಕಿನ ಮನೆ (36'x68') ಮತ್ತು ಹಳೆ ಮನೆ (36' x 20') ಮಾರಾಟಕ್ಕೆ ಇದೆ. ಒಟ್ಟು ಜಾಗದ ಅಳತೆ : 36'x88'
7892587685, 9739903499

**ಮನೆ ಬಾಡಿಗೆಗೆ ಇದೆ**
First Floor : 2 BHK | Rs. 7000/-
Second Floor : 2BHK | Rs. 6000/-
3rd Main, 16th Cross, KTJ Nagara
90663 45346

**ಪಕ್ಕಾ ನಾಟಿ ಕೋಳಿ ದೊರೆಯುತ್ತದೆ**
400 / Kg. ಸಂಪರ್ಕಿಸಿ :
ಮೊ. 83105-91159

**1946**
**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್, ದಾವಣಗೆರೆ.
9900438052, 9740153513

**ರಕ್ತ ದಾನ ಶ್ರೇಷ್ಠ ದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ವಿದ್ಯಾಭ್ಯಾಸ - ಎಸ್.ಎಸ್.ಎಲ್.ಸಿ. ವಯಸ್ಸು : 25 ರಿಂದ 40ರ ಒಳಗೆ
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ
ಮಂಡಿಪೇಟೆ, ದಾವಣಗೆರೆ.
94482 72734

**ಬೇಕಾಗಿದ್ದಾರೆ**
ಫೀಲ್ಡ್ ಆಫೀಸರ್ ಕೆಲಸಕ್ಕೆ ಹುಡುಗರು ಮತ್ತು TALLY ಅನುಭವಿರುವ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಕಿಸಾನ್ ವರ್ಲ್ಡ್
ಹದಡಿ ರೋಡ್, ದಾವಣಗೆರೆ .
97433 83672

**ತಕ್ಷಣ ಬೇಕಾಗಿದ್ದಾರೆ**
7ನೇ ತರಗತಿಯಿಂದ ಡಿಗ್ರಿಯವರೆಗೆ ವಿದ್ಯಾಭ್ಯಾಸ ಮಾಡಿದ ಹುಡುಗರು, ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಪಾರ್ಟ್ ಟೈಂ ಕೆಲಸಕ್ಕೆ ಮಹಿಳೆಯರು
88614 38237

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB
NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10
CBSE / ICSE Boards,
NEET / IIT - JEE / Olympiads
Memory Techniques + Hand Writing
97398 65711, 94822 44114

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**Avoid Mosquiteos**
Mosquito Nets for doors & windows
Sri Gowri Enterprises
#7C2, 4th cross Near Shaneshwara Temple Karur Industrial Area, P.B Road, Davanagere -577006
72049 94628

**WANTED**
OFFICE BOY-1
SSLC Office Assistant In Tally Ladies
Gaurav Communications, Davangere. M.NO :
9448728866, 88613 68296

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water. **(Only for Veg)**
Vidyanagar last city bus stop, Davangere
8951938228, 8050222181

**HOUSE FOR LEASE / RENT**
2 BHK- 30x50, 2nd floor 5th cross, Mahalakshmi Badavane, Behind Kaveri Apartment, Davanagere.
99809 33002

**LAND, DAIRY & POULTRY LEASE/RENT**
Land of 40 acres including Dairy, Poultry is available for Lease or Rent.
60 kms away from Davangere.
93806 10220

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED**
CIVIL ENGINEER'S
Freshers or with 2-3 years Experienced. Projects at Bangalore and Davangere.
80880 50729, 89711 03671

**WANTED**
MARKETING EXECUTIVE
2 to 3 years Experience, DAVANGERE.
63620 23451, 97434 37003

# ಸಾಮಾಜಿಕ ಸೇವೆಯಲ್ಲೂ ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ



ದಾವಣಗೆರೆ, ಸೆ. 16 - ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ದೊಡ್ಡ ಹಾಗೂ ಸಣ್ಣ ವ್ಯಾಪಾರಸ್ಥರಿಗೆ ಅವರ ವ್ಯಾಪಾರಾಭಿವೃದ್ಧಿಗಾಗಿ ಸಹಕಾರವನ್ನು ನೀಡುತ್ತಿದೆ. ಅಲ್ಲದೇ, ಆರ್ಥಿಕವಾಗಿ ಹಿಂದುಳಿದವರು ಮತ್ತು ಮಧ್ಯಮ ವರ್ಗದವರನ್ನು ಮೇಲೆತ್ತಲು ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಿ, ಕಾರ್ಯೋನ್ಮುಖವಾಗಿದೆ ಎಂದು ಸೊಸೈಟಿಯ ಅಧ್ಯಕ್ಷ ಪ್ರಶಾಂತ್ ವಿ. ವೆರ್ಣೇಕರ್ ಸಂತಸ ವ್ಯಕ್ತಪಡಿಸಿದರು.

ಇಲ್ಲಿನ ವಿನೋಬ ನಗರದ ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನದಲ್ಲಿ ಏರ್ಪಾಡಾಗಿದ್ದ ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ 27ನೇ ವರ್ಷದ 2023-24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅತಿ ಶೀಘ್ರದಲ್ಲಿ ಸೊಸೈಟಿಯ ಹೊಸ ಶಾಖೆಯನ್ನು ಚನ್ನಗಿರಿಯಲ್ಲಿ ತೆರೆಯುವ ಉದ್ದೇಶ ಹೊಂದಿದ್ದು, ಸೊಸೈಟಿಯ ಗ್ರಾಹಕರು ಮತ್ತು ಷೇರುದಾರರ ಅನುಕೂಲಕ್ಕಾಗಿ ಆನ್‌ಲೈನ್ ಮೂಲಕ ವ್ಯವಹರಿಸುವ ಉದ್ದೇಶದಿಂದ ಈಗಾಗಲೇ ಹೊಸ ಸಾಫ್ಟ್‌ವೇರ್ ತಂತ್ರಾಂಶವನ್ನು ಅಳವಡಿಸಲಾಗುತ್ತಿದೆ. ಈ ಎಲ್ಲಾ ಮಹತ್ಕಾರ್ಯಗಳಿಗೆ ಸಮಾಜ ಮತ್ತು ಸಮಾಜದ ಸೇವಾ ಸಂಸ್ಥೆಗಳು ನಮ್ಮೊಂದಿಗೆ ಕೈ ಜೋಡಿಸುತ್ತಿವೆ ಎಂದು ಪ್ರಶಾಂತ್ ಹೇಳಿದರು.

ಪ್ರಸಕ್ತ ಸಾಲಿನಲ್ಲಿ ಸಂಘವು ಸುಮಾರು 89 ಕೋಟಿಗೂ ಹೆಚ್ಚು ವ್ಯವಹಾರವನ್ನು ನಡೆಸಿ, 1.12 ಕೋಟಿ ಲಾಭ ಗಳಿಸುವ ಮೂಲಕ ಅತ್ಯುತ್ತಮ ಲಾಭ ಗಳಿಸುವ ಸಂಘದ ಸಾಲಿನಲ್ಲಿ ಮೇರು ಪಂಕ್ತಿಯಲ್ಲಿ ಮುಂದುವರೆಯುತ್ತಿದೆ. ಸಂಘವು ಹೆಚ್ಚು ಲಾಭ ಗಳಿಸುತ್ತಿರುವುದರಿಂದ ಸಮಾಜದ ಸದಸ್ಯರಿಗೆ ನೆರವಾಗಲು ವಿದ್ಯಾಭ್ಯಾಸಕ್ಕೆ ಧನ ಸಹಾಯ, ಸಂತ್ರಸ್ಥರ ಸಹಾಯಕ್ಕಾಗಿ ಮರಣೋತ್ತರ ನಿಧಿ, ವಿಕಲಚೇತನ, ವಿಧವಾ ವೇತನ, 65 ವರ್ಷ ಮೇಲ್ಪಟ್ಟ ಆರ್ಥಿಕವಾಗಿ ಹಿಂದುಳಿದ ಸದಸ್ಯರಿಗೆ ಪಿಂಚಣಿ ಮುಂತಾದ ಯೋಜನೆಗಳನ್ನು ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು.

2024, ಮಾರ್ಚ್ ಅಂತ್ಯಕ್ಕೆ ತಮ್ಮ ಸೊಸೈಟಿಯು 2827 ಸದಸ್ಯರನ್ನು ಹೊಂದಿದ್ದು, 43.21 ಲಕ್ಷಗಳಷ್ಟು ಷೇರು ಬಂಡವಾಳ ಇದೆ.

## ಸಂಘದ ಸರ್ವ ಸದಸ್ಯರ ಮಹಾಸಭೆಯಲ್ಲಿ ಸೊಸೈಟಿಯ ಅಧ್ಯಕ್ಷ ಪ್ರಶಾಂತ್ ವಿ. ವೆರ್ಣೇಕರ್ ಸಂತಸ

5.01 ಕೋಟಿ ರೂ.ಗಳು ಕಾಯ್ದಿಟ್ಟ ಮತ್ತು ಇತರೆ ನಿಧಿಗಳಾಗಿದ್ದು 2023-24ಕ್ಕೆ ಸೊಸೈಟಿಯು 31.62 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದೆ ಎಂದು ಅಂಕಿ - ಅಂಶಗಳೊಂದಿಗೆ ಸಂಘದ ಪ್ರಗತಿಯನ್ನು ಸಭೆಯ ಮುಂದಿಟ್ಟರು.

ವರ್ಷಾಂತ್ಯಕ್ಕೆ 22.77 ಕೋಟಿ ರೂ. ಠೇವಣಿ ಸಂಗ್ರಹವಾಗಿದೆ. ಸದರಿ ಸಾಲಿನಲ್ಲಿ ಸೊಸೈಟಿಯು ನೀಡಿರುವ ಸದಸ್ಯರ ಸಾಲಗಳ ಒಟ್ಟು ಮೊತ್ತ 26.44 ಕೋಟಿ ರೂ ಆಗಿದ್ದು, ಪ್ರತಿ ವರ್ಷದಂತೆ ಈ ಬಾರಿಯೂ ಗೃಹ, ಜಾಮೀನು ಸಾಲ, ವ್ಯವಹಾರ ಸಾಲ, ಆಸ್ತಿ ಆಧಾರಿತ, ವಾಹನ ಖರೀದಿಗೆ ಮತ್ತು ಆಭರಣ ಆಧಾರಿತ ಸಾಲಗಳನ್ನು ನೀಡಲಾಗಿದೆ ಎಂದು ಅವರು ತಿಳಿಸಿದರು.

ಸಮಾಜದ ಉನ್ನತಿಗಾಗಿ ಶ್ರಮಿಸಲು ಸಂಘವು ಕಾರ್ಯಪ್ರವೃತ್ತವಾಗಿದ್ದು, ಸದಸ್ಯರ ಠೇವಣಿಗಳ ಹಿತರಕ್ಷಣೆಯನ್ನು ಕಾಪಾಡುವ ಸಲುವಾಗಿ ಅಧಿಕವಾಗಿ ಸ್ಥಿರಾಸ್ತಿ ಮತ್ತು ಆಭರಣ ಆಧಾರಿತ ಸಾಲದಲ್ಲಿ ವಿನಿಯೋಗಿಸುತ್ತಿದ್ದೇವೆ. ನಮ್ಮ ಸೊಸೈಟಿಯ ಅಭಿವೃದ್ಧಿ ಮತ್ತು ಲಾಭಾಂಶವನ್ನು ಅವಲೋಕಿಸಿದಲ್ಲಿ ದಾವಣಗೆರೆ ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಅಭಿವೃದ್ಧಿ ಹೊಂದುತ್ತಿರುವ ಸೊಸೈಟಿಗಳ ಸಾಲಿನಲ್ಲಿ ನಮ್ಮ ಸೊಸೈಟಿಯೂ ಸೇರಿದೆ ಎಂದು ಪ್ರಶಾಂತ್ ವಿ. ವೆರ್ಣೇಕರ್ ಸಂತೋಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಶಂಕರ್ ಎನ್. ವಿಠ್ಠಲ್‌ಕರ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಉಪಾಧ್ಯಕ್ಷ ರಾಜೀವ್ ವಿ. ವೆರ್ಣೇಕರ್, ನಿರ್ದೇಶಕರುಗಳಾದ ಮಂಜುನಾಥ್ ಕುಡತರ್‌ಕರ್, ಚಂದ್ರಹಾಸ ಕುರ್ಡೇಕರ್, ಸತೀಶ್ ಎಸ್. ಸಾನು, ವಾಸುದೇವ ರಾಯ್ಕರ್, ರಾಘವೇಂದ್ರ, ಎನ್. ದಿವಾಕರ್, ದೀಪಕ್ ಎನ್. ಶೇಟ್, ರಾಘವೇಂದ್ರ ಎಸ್. ಕುರ್ಡೇಕರ್, ವಿಜಯ ಎಸ್. ವಿಠ್ಠಲ್‌ಕರ್, ಶ್ವೇತಾ ಜಿ. ಶೇಟ್, ಹೊನ್ನಾಳಿ ನಾಮನಿರ್ದೇಶಕರಾದ ನಾರಾಯಣ ಎಂ. ರಾಯ್ಕರ್, ಶ್ರೀಕಾಂತ್ ಕುರ್ಡೇಕರ್, ನಾಮ ನಿರ್ದೇಶಿತ ನಿರ್ದೇಶಕರುಗಳಾದ ರಾಘವೇಂದ್ರ ಡಿ. ರೇವಣಕರ್, ಡಿ.ಎ. ವಿಶ್ವನಾಥ್ ಅವರುಗಳು ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಕಾರ್ಯದರ್ಶಿ ಸುವರ್ಣ ಎಂ. ಕುರ್ಡೇಕರ್ ಸ್ವಾಗತಿಸಿ, ವಂದಿಸಿದರು.

**ದೈವಜ್ಞ ಪುರಸ್ಕಾರ :** ಕಾರ್ಯಕ್ರಮದ ನಂತರ ನಡೆದ ದೈವಜ್ಞ ಪುರಸ್ಕಾರ ಮತ್ತು ದೈವಜ್ಞ ಪ್ರೋತ್ಸಾಹ ಸಮಾರಂಭದ ಅಧ್ಯಕ್ಷತೆಯನ್ನು ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಅಧ್ಯಕ್ಷ ಪ್ರಶಾಂತ್ ವಿ. ವೆರ್ಣೇಕರ್ ವಹಿಸಿದ್ದರು.

ಅಖಿಲ ಕರ್ನಾಟಕ ದೈವಜ್ಞ ಸಮಾಜ ಸಂಘದ ಅಧ್ಯಕ್ಷ ರವಿ ಗಾಂವಕರ್, ಕಾರ್ಯದರ್ಶಿ ಉದಯ ರಾಯ್ಕರ್, ಉಪಾಧ್ಯಕ್ಷ ಸತ್ಯನಾರಾಯಣ ಆರ್. ರಾಯ್ಕರ್, ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ ಶಂಕರ್ ಎನ್. ವಿಠ್ಠಲ್‌ಕರ್, ಉಪಾಧ್ಯಕ್ಷ ರಾಜೀವ್ ವಿ. ವೆರ್ಣೇಕರ್, ಸರಾಫ್ ಅಸೋಸಿಯೇಷನ್ ಅಧ್ಯಕ್ಷ ನಲ್ಲೂರು ಅರುಣಾಚಲ ಮತ್ತು ಇನ್ನಿತರರು ಉಪಸ್ಥಿತರಿದ್ದರು.

ಸೊಸೈಟಿ ನಿರ್ದೇಶಕ ವಾಸುದೇವ ಎಲ್. ರಾಯ್ಕರ್ ಸ್ವಾಗತಿಸಿದರು. ಕಾರ್ಯದರ್ಶಿ ಸುವರ್ಣ ಎಂ.ಕುರ್ಡೇಕರ್ ವಂದಿಸಿದರು.

# ನಾಳೆ ದಾಮ್‌ಕೋಸ್ ರಜತ ಮಹೋತ್ಸವ

ದಾವಣಗೆರೆ, ಸೆ.16- ದಾವಣಗೆರೆ ಅಡಿಕೆ ಅಭಿವೃದ್ಧಿ ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘದ (ದಾಮ್‌ಕೋಸ್) ರಜತ ಮಹೋತ್ಸವ ಸಮಾರಂಭವು ನಗರದ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಸಮುದಾಯ ಭವನದಲ್ಲಿ ನಾಡಿದ್ದು ದಿನಾಂಕ 18ರಿಂದ 20ರ ವರೆಗೆ ನಡೆಯಲಿದೆ ಎಂದು ದಾಮ್‌ಕೋಸ್ ಅಧ್ಯಕ್ಷ ಬಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸ್ಥೆಯು ಸಾಕಷ್ಟು ಏಳು-ಬೀಳುಗಳನ್ನು ಎದುರಿಸಿದೆ. ಸಂಘದ ಸದಸ್ಯರು ಹಾಗೂ ನಿರ್ದೇಶಕರ ಶ್ರಮದಿಂದ ದಾಮಕೋಸ್ ಪ್ರಗತಿ ಕಾಣುತ್ತಾ ಇಂದು ರಜತ ಮಹೋತ್ಸವ ಆಚರಿಸಲು ಸಜ್ಜಾಗಿದೆ ಎಂದು ಹೇಳಿದರು.

ನಾಡಿದ್ದು ದಿನಾಂಕ 18ರ ಬೆಳಗ್ಗೆ 11 ಗಂಟೆಗೆ ಸಾಮಾನ್ಯ ಸಭೆ ಹಾಗೂ ಕೃಷಿ ಯಂತ್ರ ಮೇಳ ಆಯೋಜಿಸಲಾಗಿದ್ದು, ಮೇಳವನ್ನು ಸಂಘದ ನಿರ್ದೇಶಕ ಹೆಚ್.ಜಿ. ಮರುಳಸಿದ್ದಪ್ಪ ಉದ್ಘಾಟಿಸಲಿದ್ದಾರೆ.

ದಿನಾಂಕ 19ರ ಬೆಳಗ್ಗೆ 11ಕ್ಕೆ ರಜತ ಮಹೋತ್ಸವ ಕಾರ್ಯಕ್ರಮ ನಡೆಯಲಿದ್ದು, ಸಿರಿಗೆರೆ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಶ್ರೀಗಳು ಸಾನ್ನಿಧ್ಯ ವಹಿಸುವರು. ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ಸದಸ್ಯರಿಗೆ ಬೆಳ್ಳಿ ನಾಣ್ಯ ವಿತರಿಸಲಾಗುವುದು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಹಕಾರಿ ಸಚಿವ ಕೆ.ಎನ್. ರಾಜಣ್ಣ, ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಶಾಸಕ ಕೆ.ಎಸ್. ಬಸವಂತಪ್ಪ, ಮಾಜಿ ಸಂಸದ ಜಿ.ಎಂ ಸಿದ್ದೇಶ್ವರ, ಮಾಜಿ ಶಾಸಕ ಎಸ್.ಎ ರವೀಂದ್ರನಾಥ್, ಮಾಜಿ ಅಡಕೆ ಕಾರ್ಯಪಡೆ ಅಧ್ಯಕ್ಷ ಆರಗ ಜ್ಞಾನೇಂದ್ರ ಸೇರಿದಂತೆ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

**ಸಂಸ್ಥೆ ಲಾಭದಲ್ಲಿದೆ..!**

**ಸಂಸ್ಥೆಯಲ್ಲಿ ಮೊದಲಿಗೆ 13 ಲಕ್ಷ ರೂ. ಗಳಷ್ಟಿದ್ದ ಷೇರು ಮೊತ್ತವು, ಪ್ರಸ್ತುತ ದಿನಗಳಲ್ಲಿ 45ಲಕ್ಷ ರೂ.ಗಳಿಗೆ ಏರಿಕೆಗೊಳಿಸಿದ್ದೇವೆ ಎಂದು ದಾಮಕೋಸ್ ಅಧ್ಯಕ್ಷ ಬಿ.ಕೆ. ಶಿವಕುಮಾರ್ ತಿಳಿಸಿದರು. ವಾರ್ಷಿಕ ವಹಿವಾಟು 30 ಕೋಟಿ ರೂ. ಗಳಿದ್ದು, ಪ್ರಸಕ್ತ ವರ್ಷ 30 ಲಕ್ಷ ರೂ.ಗಳನ್ನು ಉಳಿತಾಯಗೊಳಿಸಿ ಸಂಸ್ಥೆಯು ಲಾಭದ ಪಥದಲ್ಲಿ ಹೊರಟಿದೆ ಎಂದರು.**

**ಷೇರು ಹೆಚ್ಚಿಸುವ ಸಂಕಲ್ಪ..!**

**ತುಮಕೋಸ್ ಸಂಸ್ಥೆಯ ಸಮವಾಗಿ ನಮ್ಮ ಸಂಸ್ಥೆಯೂ ಇದೆ. ಆದರೆ ಷೇರುದಾರರ ಸಂಖ್ಯೆಯಲ್ಲಿ ನಮ್ಮ ಸಂಸ್ಥೆ ಕಡಿಮೆಯಿದ್ದು, ಮುಂದಿನ ದಿನಗಳಲ್ಲಿ ನಾವು ಸಹ 15 ಸಾವಿರ ಜನ ಷೇರುದಾರರನ್ನು ಹೊಂದಿವ ಮೂಲಕ 10 ಕೋಟಿ ಸಾಧನೆ ಗುರಿ ಹೊಂದಿದ್ದೇವೆ.**

**ಮಾಹಿತಿ ಕೇಂದ್ರ ಸ್ಥಾಪಿಸುವ ಗುರಿ..!**

**ಪ್ರಾರಂಭದಲ್ಲಿ ನಮ್ಮ ಸಂಸ್ಥೆ ಖಾಲಿ ಚೀಲ ಖರೀದಿಸಲು ಕಷ್ಟ ಪಡುತ್ತಿತ್ತು. ಇಂದು ಸ್ವಂತ ಕಟ್ಟಡ ಹೊಂದಿದೆ. ಮಾಜಿ ಶಾಸಕ ಎಸ್.ಎ. ರವೀಂದ್ರನಾಥ್, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಮತ್ತು ಎಸ್.ಟಿ. ಸೋಮಶೇಖರ್ ಅವರ ಪ್ರಯತ್ನದಿಂದ ತಾಲ್ಲೂಕು ಕಚೇರಿ ಬಳಿ ರೈತರಿಗಾಗಿ ಸಂಸ್ಥೆಗೆ ಜಾಗ ಲಭಿಸಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ರೈತರಿಗಾಗಿ ಒಂದು ಕಟ್ಟಡ ನಿರ್ಮಿಸಿ, ಅಡಿಕೆ ಬೆಳೆಯ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಒಂದು ಕೇಂದ್ರ ತೆರೆಯುವ ಯೋಜನೆ ಹೊಂದಿರುವ ಬಗ್ಗೆ ತಿಳಿಸಿದರು.**

ದಿನಾಂಕ 20ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೃಷಿ ವಿಜ್ಞಾನಿಗಳಿಂದ ಭವಿಷ್ಯದಲ್ಲಿ ಅಡಿಕೆ ಬೆಳೆ ಎಂಬ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.

ಈ ವೇಳೆ ಸಂಘದ ಉಪಾಧ್ಯಕ್ಷ ಹೆಚ್.ಜಿ. ಮಲ್ಲಿಕಾರ್ಜುನ್, ನಿರ್ದೇಶಕರಾದ ಎ.ಜಿ. ರೇವಣಸಿದ್ದಪ್ಪ, ಬಿ. ಬಸವರಾಜಯ್ಯ, ಕೆ.ಜಿ. ಉಮೇಶ್, ಎಂ.ಆರ್. ಮಂಜುನಾಥಯ್ಯ, ಜಿ.ಸಿ. ವಾಮದೇವಪ್ಪ, ರೈತ ಮುಖಂಡ ಶಿವಕುಮಾರ್, ಲಿಂಗರಾಜ್ ಮತ್ತಿತರರಿದ್ದರು.

# ನಗರದಲ್ಲಿ ಸಡಗರ-ಸಂಭ್ರಮದ ಈದ್ - ಮಿಲಾದ್ ಆಚರಣೆ

ದಾವಣಗೆರೆ, ಸೆ.16- ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಜನ್ಮದಿನವಾದ ಈದ್ ಮಿಲಾದ್ ಹಬ್ಬವನ್ನು ನಗರಾದ್ಯಂತ ಮುಸ್ಲಿಂ ಬಾಂಧವರು ಸಡಗರ - ಸಂಭ್ರಮದಿಂದ ಆಚರಿಸಿದರು.

ಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಮೆರವಣಿಗೆಯು ಮಧ್ಯಾಹ್ನ 2.30 ಕ್ಕೆ ಆಜಾದ್ ನಗರದಲ್ಲಿ ಫಾತೀಹಾ ಖ್ವಾನಿ ಪಠಿಸಿ ಚಾಲನೆ ನೀಡಲಾಯಿತು.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ವಿಧಾನ ಪರಿಷತ ಸದಸ್ಯ ಕೆ.ಅಬ್ದುಲ್ ಜಬ್ಬಾರ್, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಅಯೂಬ್ ಪೈಲ್ವಾನ್, ಮಿಲಾದ್ ಸಮಿತಿ ಅಧ್ಯಕ್ಷ ಎ.ಬಿ. ಹಬೀಬ್ ಉಲ್ಲಾಸಾಬ್, ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಚಾಮರಾಜಪೇಟೆ, ಮಂಡಿಪೇಟೆ, ಬಾರ್ ಲೈನ್ (ವಸಂತರಸ್ತೆ) ರೈಲ್ವೆ ಗೇಟ್ ಮೂಲಕ ಅರುಣ ಚಿತ್ರಮಂದಿರ ವೃತ್ತ ತಲುಪಿ, ವಿನೋಬನಗರ ಹಾಗೂ ಶಂಕರ್ ವಿಹಾರ್ ಬಡಾವಣೆಯಿಂದ ಬಂದ ಮುಸ್ಲಿಂ ಬಾಂಧವರು ಅಲ್ಲಿ ವಿಲೀನಗೊಂಡು, ಪಿ.ಬಿ.ರಸ್ತೆ ಮೂಲಕ ಗಾಂಧಿ ವೃತ್ತದಲ್ಲಿ ಕೆಟಿಜೆ ನಗರ, ನಿಟ್ಟುವಳ್ಳಿಯಿಂದ ಆಗಮಿಸಿದ ಇನ್ನೊಂದು ತಂಡ ಅಲ್ಲಿ ಜಮಾವಣೆಗೊಂಡು ಸಾಮೂಹಿಕವಾಗಿ ಮುಂದೆ ಸಾಗಿದವು. ತಂಜೀಮ್ ಅಧ್ಯಕ್ಷ ದಾದಾ ಪೀರ್ (ದಾದುಸೇಠ್) ಸೇರಿದಂತೆ ಪದಾಧಿಕಾರಿಗಳು ತಂಡ ಮಾಡಿಕೊಂಡು ಸಾಗುತಿದ್ದರು.

ಅಶೋಕ ಟಾಕೀಸ್ ರೈಲ್ವೆ ಗೇಟ್, ಕೆ.ಆರ್.ರಸ್ತೆ ಮೂಲಕ ಮಾಗಾನಹಳ್ಳಿ ರಸ್ತೆ, ಮಂಡಕ್ಕಿ ಭಟ್ಟಿ ಲೇಔಟ್, ಮಹಮ್ಮದ್ ಅಲಿ ಜೋಹರ್ ನಗರ, ಮಿಲಾದ್ ಮೈದಾನದಲ್ಲಿ ಸೇರಿ ಸಮಾರೋಪಗೊಂಡಿತ್ತು.

ಹಬ್ಬದ ಕೇಂದ್ರ ಬಿಂದು ಮದೀನಾ ಗುಂಬಜ್ ಮಂಡಿಪೇಟೆ ಬಳಿ ಬಂದಾಗ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಮಾಲಾರ್ಪಣೆ ಮಾಡಿ, ಟ್ರ್ಯಾಕ್ಟರ್ ಚಾಲನೆ ಮಾಡುವ ಮೂಲಕ ಹಬ್ಬದ ಶುಭಾಶಯ ಕೋರಿದರು.

ಕುರ್ತಾ ಪೈಜಾಮಾ ಧರಿಸಿಕೊಂಡು ತಲೆಗೆ ಟೋಪಿ ಕೈಯಲ್ಲಿ ಝಂಡಾ ಹಿಡಿದುಕೊಂಡು ತಮ್ಮ ಮಕ್ಕಳೊಂದಿಗೆ 'ನಾರೇ ತಕಬೀರ್ ಅಲ್ಲಾಹು ಅಕ್ಬರ್' ಎಂಬ ಘೋಷ ವಾಕ್ಯಗಳನ್ನು ಪಠಿಸುತ್ತಾ ಹೆಜ್ಜೆ ಹಾಕುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ವಿವಿಧ ಬಡಾವಣೆಗಳಿಂದ ತಂಡೋಪ ತಂಡವಾಗಿ ಬರುತ್ತಿದ್ದ ಮುಸ್ಲಿಂ ಬಾಂಧವರಿಗೆ ವಿವಿಧ ಸಂಘಟನೆಗಳಿಂದ ಷರಬತ್, ಹಣ್ಣು, ನೀರು ವಿತರಿಸುತ್ತಿದ್ದರು.

ಈದ್ - ಮಿಲಾದ್ ಸಮಿತಿ ಅಧ್ಯಕ್ಷ ಎ.ಬಿ. ಹಬೀಬುಲ್ಲಾ ಸಾಬ್ ಅವರ ಅಧ್ಯಕ್ಷತೆಯಲ್ಲಿ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ನಗರದ ಮಸೀದಿಗಳ ಉಲೇಮಾಗಳು ತಕರೀರ್ (ಉಪನ್ಯಾಸ) ಮಾಡಿದರು.

ಮುಸ್ಲಿಂ ಮುಖಂಡರಾದ ಎಸ್.ಕೆ.ಅಮ್ಜದ್, ಷಾನವಾಜ್ ಖಾನ್, ನಸೀರ್ ಅಹ್ಮದ್, ಅಕ್ಬರ್, ಪಾಲಿಕೆ ಸದಸ್ಯ ಎ.ಬಿ.ರಹೀಂ, ಮಿಲಾದ್ ಸಮಿತಿಯ ಯಾಸೀನ್ ಪೀರ್ ರಜ್ವಿ, ಬೇಕರಿ ಅನ್ವರ್ ಸಾಬ್, ರಿಯಾಜ್ ಅಹಮ್ಮದ್, ಎಂ.ಆರ್.ಸಿದ್ದೀಕ್, ಎಸ್. ಕೆ.ರಹಮತ್ ಉಲ್ಲಾ, ಕಲೀಮುಲ್ಲಾ ಸೇರಿದಂತೆ ಇನ್ನು ಅನೇಕರು ಉಪಸ್ಥಿತರಿದ್ದರು.

ಜಂಟಿ ಕಾರ್ಯದರ್ಶಿ ವಿ.ಪಿ. ಶಫೀಸಾಬ್ ಸ್ವಾಗತಿಸಿದರು. ಕಾರ್ಯದರ್ಶಿ ನಜೀರ್ ಅಹಮದ್ ಕೊನೆಯಲ್ಲಿ ವಂದಿಸಿದರು.

## ವೆಸ್ಟ್ ಲಂಡನ್ ಹ್ಯಾರೋ ನಗರದ ಮುಂಬಯಿಕರ್ ವಡಾಪಾವ್ ಹೋಟೆಲ್‌ಗೆ ಪ್ರೊ.ಮುರುಗೇಂದ್ರಪ್ಪ ಭೇಟಿ



ದಾವಣಗೆರೆ, ಸೆ.16- ಇಂಗ್ಲೆಂಡ್, ಯೂರೋಪ್ ಪ್ರವಾಸದಲ್ಲಿರುವ ನಗರದ ನಿವೃತ್ತ ಪ್ರಾಧ್ಯಾಪಕ ಪ್ರೊ. ಮುರುಗೇಂದ್ರಪ್ಪ ಅವರು ತಮ್ಮ ಬಂಧುಗಳಾದ ಲಂಡನ್‌ನ ಮೋರ್ವಿಕ್ ನಿವಾಸಿಗಳಾದ ಶ್ರೀಮತಿ ಆಶಾ ವಿಶ್ವನಾಥ್ ಹಿರೇಮಠದ್ ಮತ್ತು ಸೌತ್ ಲಂಡನ್ ಶ್ರೀಮತಿ ವೀಣಾ ಅವರೊಂದಿಗೆ ಭೇಟಿ ನೀಡಿದ್ದರು. ಹೋಟೆಲ್ ನಿರ್ದೇಶಕರಾದ ದಾವಣಗೆರೆಯ ಪ್ರವೀಣ್‌ಕುಮಾರ್ ಮತ್ತು ಕಲಾವಿದ ಎ.ಮಹಲಿಂಗಪ್ಪ ಹಾಗೂ ಶ್ರೀಮತಿ ಪ್ರಭಾ ಮಹೇಶ್ ಜೊತೆಯಲ್ಲಿದ್ದರು.

## ನಗರದಲ್ಲಿ ಸಾಬೂನು ಮೇಳ ಆರಂಭ

ದಾವಣಗೆರೆ, ಸೆ.16- ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದಿಂದ ನಗರದ ರೇಣುಕ ಮಂದಿರದಲ್ಲಿ ಸಾಬೂನು ಮೇಳ ಇಂದು ಆರಂಭಗೊಂಡಿದ್ದು. ಇದೇ ದಿನಾಂಕ 25ರವರೆಗೆ ನಡೆಯಿದೆ ಎಂದು ಸಂಸ್ಥೆಯ ಬೆಂಗಳೂರು ಶಾಖೆಯ ಸಹಾಯಕ ಪ್ರಧಾನ ವ್ಯವಸ್ಥಾಪಕ ಎಸ್.ಗುರುಪ್ರಸಾದ್ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಮಂಜುನಾಥ್, ಸಿದ್ದನಾಯಕ್, ಗಂಗರಾಜ್, ಬಿ.ಒ. ಕಾಮತ್ ಸೇರಿದಂತೆ ಮಾರುಕಟ್ಟೆ ವಿತರಕರು ಉಪಸ್ಥಿತರಿದ್ದರು.

## ಇಂದು ಎಲ್.ಐ.ಸಿ ಏಜೆಂಟರ ಸಭೆ

ಎಲ್.ಐ.ಸಿ. ಶಾಖೆ 1ರ ಏಜೆಂಟ್ಸ್ ಅಸೋಷಿಯೇಷನ್ನಿನ 18ನೇ ವಾರ್ಷಿಕ ಮಹಾಸಭೆಯು ಎಲ್.ಐ.ಸಿ. ಏಜೆಂಟ್ಸ್ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 10-30 ಗಂಟೆಗೆ ನಡೆಯಲಿದೆ. ಸಂಘದ ಅಧ್ಯಕ್ಷ ಎಸ್.ಜಿ.ಪಂಪಣ್ಣ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ವಿಮಾ ನಿಗಮದ ಮುಖ್ಯ ಪ್ರಬಂಧಕ ಬಿ. ಶಿವಪ್ಪನಾಯ್ಕ ಹಾಗೂ ನಿಗಮದ ಜಗಳೂರು ಸಂಪರ್ಕ ಶಾಖೆ ವ್ಯವಸ್ಥಾಪಕ ಸೈಯದ್ ಜುಬೇರ್ ಅಹಮದ್ ಆಗಮಿಸುವರು ಎಂದು ಕಾರ್ಯದರ್ಶಿ ಡಿ.ಸಿ.ಶಿವಮೂರ್ತಿ ತಿಳಿಸಿದ್ದಾರೆ.

# ಇಂದು ಶ್ರೀ ಪಂಚಾಕ್ಷರಿ, ಶ್ರೀ ಪುಟ್ಟರಾಜ ಗವಾಯಿಗಳ ಪುಣ್ಯಸ್ಮರಣೆ

ದಾವಣಗೆರೆ, ಸೆ.16- ಬಾಡಕ್ರಾಸ್ ಬಳಿಯ ಶ್ರೀಗುರು ಪುಟ್ಟರಾಜ ನಗರದಲ್ಲಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ನಾಳೆ ದಿನಾಂಕ 17ರ ಮಂಗಳವಾರ ಪಂಚಾಕ್ಷರಿ ಗವಾಯಿ ಅವರ 80ನೇ ಪುಣ್ಯಸ್ಮರಣೆ ಹಾಗೂ ಪುಟ್ಟರಾಜ ಕವಿ ಗವಾಯಿ ಅವರ 14ನೇ ಪುಣ್ಯಸ್ಮರಣೆ ಹಮ್ಮಿಕೊಳ್ಳಲಾಗಿದೆ ಎಂದು ಪುಣ್ಯಾಶ್ರಮದ ನಿರ್ದೇಶಕ ದೇವರಮನೆ ಶಿವಕುಮಾರ ತಿಳಿಸಿದರು.

ಬೆಳಿಗ್ಗೆ 7.30ಕ್ಕೆ ಆಶ್ರಮದಿಂದ ಆಂಜನೇಯ ಮಿಲ್‌ವರೆಗೆ ಪೂಜ್ಯರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 10 ಗಂಟೆಗೆ ಧರ್ಮಸಭೆ ನಡೆಯಲಿದೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಗದಗಿನ ವೀರೇಶ್ವರ ಪುಣ್ಯಾಶ್ರಮದ ಕಲ್ಲಯ್ಯಜ್ಜ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಆರ್.ಬಿ. ಸಂಗಮೇಶ್ವರ ಗವಾಯಿ ಸಾನ್ನಿಧ್ಯ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟಿಸಲಿದ್ದಾರೆ. ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಸೇರಿದಂತೆ ಉದ್ಯಮಿಗಳು, ವಿವಿಧ ಕ್ಷೇತ್ರಗಳ ಮುಖಂಡರು ಭಾಗವಹಿಸಲಿದ್ದಾರೆ.

ಮಧ್ಯಾಹ್ನ 2 ಗಂಟೆಗೆ ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಿಳಿಸಿದರು. ಮುಖಂಡರಾದ ಜಾಲಿಮರದ ಕರಿಬಸಪ್ಪ, ಬಸವನಗೌಡ ಉಪಸ್ಥಿತರಿದ್ದರು.

# ಶಾಸಕ ಮುನಿರತ್ನ ಗಡಿಪಾರಿಗೆ ಛಲವಾದಿ ಮಹಾಸಭಾ ಆಗ್ರಹ

ದಾವಣಗೆರೆ, ಸೆ. 16- ಛಲವಾದಿ ಸಮುದಾಯದ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿರುವ ಬೆಂಗಳೂರು ಆರ್.ಆರ್. ನಗರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಕೂಡಲೇ ಶಾಸಕ ಸ್ಥಾನದಿಂದ ವಜಾಗೊಳಿಸಿ ಗಡಿಪಾರು ಮಾಡಬೇಕು ಎಂದು ಜಿಲ್ಲಾ ಛಲವಾದಿ ಮಹಾಸಭಾ ಆಗ್ರಹಿಸಿದೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮಹಾಸಭಾದ ಅಧ್ಯಕ್ಷ ಎನ್. ರುದ್ರಮುನಿ, ಶಾಸಕರು ಜಾತಿ ನಿಂದನೆ ಮಾಡಿ ಸಮುದಾಯಕ್ಕೆ ಕೀಳು ಮಾತಿನಲ್ಲಿ ಅವಹೇಳನಕಾ ರಿಯಾಗಿ ಮಾತನಾಡಿರುವುದು ಖಂಡನೀಯ ಎಂದರು.

ಶಾಸಕರ ವಿರುದ್ಧ ಜಾತಿನಿಂದನೆ ಪ್ರಕರಣ ದಾಖಲಿಸಿ ಬಂಧಿಸಿರುವುದು ಸ್ವಾಗತಾರ್ಹ. ಆದರೆ ಶಾಸಕ ಸ್ಥಾನವನ್ನೂ ವಜಾಗೊಳಿಸಿ, ಗಡಿಪಾರು ಮಾಡಬೇಕು. ಈ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಶಾಸಕ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದರು.

ಮುಖಂಡ ನಾಗಭೂಷಣ್ ಮಾತನಾಡಿ, ಯಾದಗಿರಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಯುವರಿಗೆ ಶಿಕ್ಷೆಯಾಗಬೇಕು. ಅಲ್ಲಿ ದಲಿತರಿಗೆ ಬಹಿಷ್ಕಾರ ಮಾಡಿರುವುದು ಖಂಡನೀಯ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಎಸ್.ಶೇಖರಪ್ಪ, ಜಯಪ್ರಕಾಶ್, ರಾಮಯ್ಯ, ಹದಡಿ ಚಂದ್ರಪ್ಪ, ನವೀನ್ ಕುಮಾರ್ ಇದ್ದರು.



## ಮಲೇಬೆನ್ನೂರಿನಲ್ಲಿ ಈದ್ ಮೆರವಣಿಗೆ

ಮಲೇಬೆನ್ನೂರು, ಸೆ.16- ಪಟ್ಟಣದ ಮುಸ್ಲಿಂ ಬಾಂಧವರು ಪ್ರವಾದಿ ಮಹಮ್ಮದ್ ಪೈಗಂಬರ್ ಅವರ ಹುಟ್ಟುಹಬ್ಬದ ಅಂಗವಾಗಿ 'ಈದ್ ಮಿಲಾದ್' ಹಬ್ಬವನ್ನು ಸೋಮವಾರ ಸಂಭ್ರಮದಿಂದ ಆಚರಣೆ ಮಾಡಿದರು. ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ನಂತರ ಈದ್ ಮಿಲಾದ್ ಮೆರವಣಿಗೆ ಆರಂಭಿಸಿದರು.


## ಹೊನ್ನಾಳಿಯಲ್ಲಿಂದು ಬಿಜೆಪಿ ಪ್ರತಿಭಟನೆ

ಹೊನ್ನಾಳಿ ತಾಲ್ಲೂಕು ಬಿಜೆಪಿ ಘಟಕವು ಇಂದು ಬೆಳಿಗ್ಗೆ 10 ಗಂಟೆಗೆ ರಾಜ್ಯ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ, ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆಯನ್ನು ಪ್ರವಾಸಿ ಮಂದಿರದಿಂದ ತಾಲ್ಲೂಕು ಕಚೇರಿವರೆಗೆ ಹಮ್ಮಿಕೊಂಡಿರುವುದಾಗಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಹಾಗೂ ಪಕ್ಷದ ಅಧ್ಯಕ್ಷ ಜೆ.ಕೆ. ಸುರೇಶ್ ತಿಳಿಸಿದ್ದಾರೆ.


## ಅಭಿನಂದನೆಗಳು ಹಾಗೂ ಕೃತಜ್ಞತೆಗಳು

ನಮ್ಮ ದಾವಣಗೆರೆ ಜಿಲ್ಲೆಯಲ್ಲಿ ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬಕ್ಕೆ ಹಗಲು ರಾತ್ರಿ ಶ್ರಮಿಸಿದ ಪೊಲೀಸ್ ಇಲಾಖೆಯ ಸಮಸ್ತ ಸಿಬ್ಬಂದಿ ವರ್ಗದವರಿಗೆ, ಪೌರಾ ಇಲಾಖೆಯ ಸಮಸ್ತ ಸಿಬ್ಬಂದಿ ವರ್ಗದವರಿಗೆ ನಮ್ಮ ಜಿಲ್ಲೆಯಲ್ಲಿ ಕೋಮು ಸೌಹಾರ್ದತೆಯನ್ನು ಮೆರೆದ ಸಮಸ್ತ ಹಿರಿಯ ನಾಯಕರಿಗೆ ಹಾಗೂ ನಾಗರಿಕ ಸಹೋದರರಿಗೆ

**ತುಂಬು ಹೃದಯದ ಅಭಿನಂದನೆಗಳು ಹಾಗೂ ಕೃತಜ್ಞತೆಗಳು...**





**ದಸ್ತಗೀರ್ ಎಸ್. ಅಸಾದುಲ್ಲಾ**

**ಅಧ್ಯಕ್ಷರು, ಕನ್ನಡ ನಾಡು ಜನತಾ ಸಮಿತಿ, ದಾವಣಗೆರೆ.**


## ಓದುಗರ ಪತ್ರ

### ಪರಿಸರ ಮಾರಕ ಪಾದಚಾರಿ



ಮಾನ್ಯರೇ,

ದಾವಣಗೆರೆಯ ವಿದ್ಯಾನಗರದ ಕಾಫಿ ಡೇ ಮುಂಭಾಗದ ರಸ್ತೆಯ ಬದಿ ನಿರ್ಮಾಣವಾಗುತ್ತಿರುವ ಪಾದಚಾರಿ ರಸ್ತೆ ಕಾಮಗಾರಿ ಪರಿಸರಕ್ಕೆ ಮಾರಕವಾಗಿದೆ.

ಇಲ್ಲಿನ ರಸ್ತೆ ಬದಿಯ ಗಿಡ-ಮರಗಳ ಸುತ್ತಲೂ ನೀರು ಇಂಗಲು ಜಾಗ ಬಿಡದೆ, ಕಾಂಕ್ರೀಟ್ ಸುರಿದು ಮರಗಳಿಗೆ ಉಸಿರು ಕಟ್ಟಿಸುತ್ತಿದ್ದಾರೆ. ಈ ಕೃತ್ಯವು ಜಾಗತಿಕ ತಾಪಮಾನದ ಹೆಚ್ಚಳ ಹಾಗೂ ಮರ-ಗಿಡಗಳ ನಾಶಕ್ಕೆ ಕಾರಣವಾಗಲಿದೆ.

ಪ್ರತಿ ಮರ-ಗಿಡಗಳ ಸುತ್ತಲೂ ಕನಿಷ್ಟ 3ರಿಂದ 4 ಅಡಿ ಜಾಗ ಬಿಟ್ಟು ಇಂಗು ಗುಂಡಿ ನಿರ್ಮಿಸಿ, ಫಲವತ್ತಾದ ಮಣ್ಣು ಸುರಿದು ಸುತ್ತಲೂ ಕಟ್ಟೆ ಕಟ್ಟುವ ಕಾಮಗಾರಿ ಮಾಡಿದರೇ, ಪರಿಸರದ ಸ್ವಾಸ್ಥ್ಯ ಕಾಪಾಡಬಹುದು.

ಎಂಸಿಸಿ 'ಬಿ' ಬ್ಲಾಕ್‌ನಲ್ಲಿಯೂ ಇದೇ ರೀತಿಯ ಕಾಮಗಾರಿ ನಡೆದಿರುವುದು ವಿಪರ್ಯಾಸ.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಸಮಸ್ಯೆಗೆ ಸ್ಪಂದಿಸಿ ಗಿಡ-ಮರ ಕಾಪಾಡುವ ಬಗ್ಗೆ ಗಮನ ಹರಿಸಬೇಕು.

**- ಸುಧಾ, ಅನಿತಾ,** ವಕೀಲರು, ದೇವರಾಜು ಅರಸು ಬಡಾವಣೆ.

## ಇಂದು ಪಿಎಲ್‌ಡಿ ಬ್ಯಾಂಕ್ ಸಭೆ

ದಾವಣಗೆರೆ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ವಾರ್ಷಿಕ ಮಹಾ ಸಭೆಯು ಇಂದು ಬೆಳಿಗ್ಗೆ 11 ಗಂಟೆಗೆ ತರಳಬಾಳು ಸಭಾ ಭವನದಲ್ಲಿ ನಡೆಯಲಿದೆ.

## ನಗರದಲ್ಲಿಂದು ಓಶೋ ಧ್ಯಾನ ಶಿಬಿರ

ಆಲೂರು ಕನ್ವೆನ್ಷನ್ ಹಾಲ್‌ನಲ್ಲಿ ಇಂದಿ ನಿಂದ ಇದೇ ದಿನಾಂಕ 22ರವರೆಗೆ ಉಚಿತ ಓಶೋ ಧ್ಯಾನ ಶಿಬಿರ ನಡೆಯಲಿದೆ. ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಯೋಜಿಸಿ ರುವ ಈ ಶಿಬಿರದಲ್ಲಿ ಆಸಕ್ತರು ಭಾಗವಹಿಸ ಬಹುದು ಎಂದು ಪುಷ್ಪ (90367 19573), ಅರ್ಚನ (97385 72318) ತಿಳಿಸಿದ್ದಾರೆ.

## ಈಶ್ವರ್ ಗಣಕ ಯಂತ್ರ ಶಾಲೆಗೆ ಶೇ. 90.77 ರಷ್ಟು ಫಲಿತಾಂಶ

ಮಲೇಬೆನ್ನೂರು, ಸೆ.16- ಪಟ್ಟಣದ ಈಶ್ವರ್ ಗಣಕ ಯಂತ್ರ ಶಾಲೆಗೆ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಮಂಡಳಿ ಆಗಸ್ಟ್ ತಿಂಗಳಲ್ಲಿ ನಡೆಸಿದ ಆಫೀಸ್ ಆಟೋಮೇಷನ್ ಗಣಕಯಂತ್ರ ಪರೀಕ್ಷೆಯಲ್ಲಿ ಶೇ.90.77 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ತೆಗೆದುಕೊಂಡಿದ್ದ 65 ವಿದ್ಯಾರ್ಥಿಗಳ ಪೈಕಿ 1 ಅತ್ಯುನ್ನತ, 10 ಪ್ರಥಮ, 26 ದ್ವಿತೀಯ ಹಾಗೂ 22 ಅಭ್ಯರ್ಥಿಗಳು ತೃತೀಯ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ.


## ವಿದೇಶ ಪ್ರಯಾಣ - ಶುಭ ಹಾರೈಕೆ



ಬೆಳಗಾವಿಯ **ಶ್ರೀ ಉಮೇಶ್ ಆರ್. ಕತ್ತಿ** ಮತ್ತು ಧರ್ಮಪತ್ನಿ **ಶ್ರೀಮತಿ ವೀಣಾ (ಬೀನಾ) ಉಮೇಶ್ ಕತ್ತಿ** ದಂಪತಿಗಳು ಅಮೇರಿಕಾದಲ್ಲಿರುವ ತಮ್ಮ ಪುತ್ರ **ಶ್ರೀ ಅಮೋಘ ಉಮೇಶ್ ಕತ್ತಿ** ಇವರನ್ನು ಭೇಟಿಯಾಗಲು ದಿನಾಂಕ : 18.09.2024 ರ ಬುಧವಾರ ಬೆಳಗಿನಜಾವ ವಿಮಾನದಲ್ಲಿ ವಿದೇಶ ಪ್ರಯಾಣ ಕೈಗೊಳ್ಳಲಿದ್ದಾರೆ. ಇವರ ವಿದೇಶ ಪ್ರಯಾಣ ಸುಖಕರವಾಗಲೆಂದು ಶುಭ ಹಾರೈಸುವ,

* ಶ್ರೀಮತಿ ಶಕುಂತಲ ಅರಳೇಶ್ವರ ಶೆಟ್ಟರ್ ಶ್ರೀ ರಾಜಶೇಖರ ಅರಳೇಶ್ವರ ಶೆಟ್ಟರ್, ಹುಬ್ಬಳ್ಳಿ.
* ಶ್ರೀಮತಿ ಪ್ರಭಾವತಿ ರವಿಕುಮಾರ್, ಮಕ್ಕಳು ಹೆಚ್.ಆರ್. ಸಚ್ಚಿನ್ ಮತ್ತು ಹೆಚ್.ಆರ್. ಸಿಂಚನ, ಬೆಂಗಳೂರು.
* ಶ್ರೀ ಹೆಚ್.ಎಸ್. ಅಶೋಕ ಶ್ರೀಮತಿ ಶಾಂತ ಅಶೋಕ, ಮಕ್ಕಳು ಹೆಚ್.ಎ. ಮಿಥುನ್, ಹೆಚ್.ಎ. ದರ್ಶನ್, ದಾವಣಗೆರೆ
* ಶ್ರೀ ಹೆಚ್.ಎಸ್. ಮಂಜುನಾಥ (ಶಿವಮೊಗ್ಗ) ದಾವಣಗೆರೆ
* ಶ್ರೀಮತಿ ಹೆಚ್.ಎಸ್. ಜಯಂತಿ (ಉಮಾ) ಶ್ರೀ ಜಿ. ಬಸವರಾಜ್, ಮಗ ಜೆ.ಬಿ. ಋತುವನ್, ಕಡೂರು
* ಶ್ರೀಮತಿ ಹೆಚ್.ಪಿ. ಶಿವಲೀಲಾ ಪ್ರಭಾಕರ ಹಳ್ಳೂರು.

ಮಗ ಸೊಸೆ ಶ್ರೀ ಸುಹಾಸ್ ಹಳ್ಳೂರು ಶ್ರೀಮತಿ ಹೆಚ್.ಎಸ್. ರಮ್ಯ ಸುಹಾಸ್, ದಾವಣಗೆರೆ ಹಾಗೂ ಬಂಧು-ಮಿತ್ರರು

# ನಗರದಲ್ಲಿ ಸುಸಜ್ಜಿತ ಪತ್ರಿಕಾ ಭವನ ನಿರ್ಮಾಣಕ್ಕೆ ಸಹಕಾರ

## ವಾರ್ತಾ ಇಲಾಖೆ ಸಹಯೋಗದ ಜಿಲ್ಲಾ ಕೆಯುಡಬ್ಲ್ಯೂಜೆ ಪತ್ರಿಕಾ ದಿನಾಚರಣೆಯಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್

ದಾವಣಗೆರೆ,ಸೆ.16- ನೈಜ ಸುದ್ದಿಗಳನ್ನು ಜನರಿಗೆ ತಲುಪಿಸುವ ಪ್ರಾಮಾಣಿಕ ಕೆಲಸವನ್ನು ಮಾಧ್ಯಮಗಳು ಮಾಡಬೇಕಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಮೊನ್ನೆ ಆಯೋಜಿಸಲಾಗಿದ್ದ ಪತ್ರಿಕಾ ದಿನಾಚರಣೆ, ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಮಾಧ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರಿಗೆ 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಪತ್ರಕರ್ತರ ರಾಜ್ಯ ಮಟ್ಟದ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ್ದನ್ನು ಮೆಲುಕು ಹಾಕಿದ ಅವರು, ಈ ಹಿಂದೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನೂ ಸಹ ಅದ್ಧೂರಿಯಾಗಿ ನಡೆಸಲಾಗಿತ್ತು ಎಂದು ನೆನಪಿಸಿಕೊಂಡರು.

ಪತ್ರಕರ್ತರಿಗೆ ಅವಶ್ಯವಿರುವ ಪತ್ರಿಕಾ ಭವನ ನಿರ್ಮಾಣಕ್ಕೆ ಸರ್ಕಾರದ ಮಟ್ಟದಲ್ಲಿ ನಿವೇಶನಕ್ಕೆ ರಿಯಾಯಿತಿ ನೀಡಲು ಅನುಮತಿ ಕೊಡಿಸಲಾಗುವುದು. ಸುಸಜ್ಜಿತ ಭವನ ನಿರ್ಮಾಣಕ್ಕೆ ಸಹಕರಿಸಲಾಗುವುದು. ಪತ್ರಕರ್ತರ ಮಕ್ಕಳಿಗೆ ಎಸ್ಸೆಸ್ ಜನಕಲ್ಯಾಣ ಟ್ರಸ್ಟ್ ಮೂಲಕವೂ ನೆರವು ನೀಡಲಾಗುತ್ತಿದೆ ಮತ್ತು ತಮ್ಮ ಸಂಪೂರ್ಣ ಸಹಕಾರ ಎಂದಿನಂತೆ ಇರುತ್ತದೆ ಎಂದು ಸಚಿವರು ತಿಳಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ. ವಿ.ಪ್ರಭಾಕರ್ ಮಾತನಾಡಿ, ಮಾಧ್ಯಮಗಳು ಸರ್ಕಾರ ಮತ್ತು ಸಮಾಜಕ್ಕೆ ಸೇತುವೆಯಾಗಿ ಕೆಲಸ ಮಾಡಬೇಕು, ಈ ನಿಟ್ಟಿನಲ್ಲಿ ಅಭಿವೃದ್ಧಿ ಪತ್ರಿಕೋದ್ಯಮಕ್ಕೆ ಹೆಚ್ಚು ಒತ್ತು ನೀಡುವ ಅವಶ್ಯವಿದೆ. ಇತ್ತೀಚಿನ ದಿನಗಳಲ್ಲಿ ಊಹಾ ಪತ್ರಿಕೋದ್ಯಮ ಬೆಳೆಯುತ್ತಿದ್ದು, ಜನರ ವಿಶ್ವಾಸಗಳಿಸಲು ಖಚಿತತೆಯ ಸುದ್ದಿಗೆ ಒತ್ತು ನೀಡಬೇಕೆಂದರು.

ನೂರಾರು ವರ್ಷಗಳ ಹಿಂದೆ ಕನ್ನಡ ಪತ್ರಿಕೋದ್ಯಮ ತುಂಬಾ ಪ್ರಕಾಶಮಾನವಾಗಿತ್ತು. ಇದೀಗ ಕಂಪ್ಯೂಟರ್ ಯುಗದಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಪಡೆದುಕೊಂಡಿದೆ. ಪತ್ರಿಕರ್ತರೂ ಸಹ ಆಯಾ ಕಾಲಕ್ಕೆ ಅನುಗುಣವಾಗಿ ತಮ್ಮ ಭೌದ್ಧಿಕ ಮಟ್ಟವನ್ನು ವೃದ್ಧಿಸಿಕೊಳ್ಳಬೇಕಾಗಿದೆ ಎಂದು ಹಿತ ನುಡಿದರು.

ಬಹುದಿನಗಳ ಗ್ರಾಮೀಣ ಪತ್ರಕರ್ತರಿಗೆ ಬಸ್‌ಪಾಸ್ ನೀಡಬೇಕೆಂಬ ಬೇಡಿಕೆ ಈಡೇರುವ ಬಗ್ಗೆ ಈಗಾಗಲೇ ಸರ್ಕಾರದ ಹಂತದಲ್ಲಿ ಎಲ್ಲಾ ಪ್ರಕ್ರಿಯೆಗಳು ಮುಗಿದಿದ್ದು, ಮುಂದಿನ 15 ದಿನಗಳಲ್ಲಿ ಚಾಲನೆ ಸಿಗುವ ವಿಶ್ವಾಸವಿದೆ ಎಂದರು.



> **ಹೆಚ್.ಎನ್. ಷಡಾಕ್ಷರಪ್ಪ, ಸಿ. ಕೇಶವಮೂರ್ತಿ, ಕಾಂ. ಪಂಪಾಪತಿ ಸೇರಿದಂತೆ ಅನೇಕರು ಮಾಧ್ಯಮ ಕ್ಷೇತ್ರದಲ್ಲಿ ತಮ್ಮದೇ ಆದ ಪ್ರಾಮಾಣಿಕ ಸೇವೆ ಸಲ್ಲಿಸಿದ್ದಾರೆ.**
> **- ಸಚಿವ ಎಸ್ಸೆಸ್ಸೆಂ ಶ್ಲಾಘನೆ**

> **ದಾವಣಗೆರೆ ಪತ್ರಿಕೋದ್ಯಮದ ಬೇರಾಗಿದ್ದು, ಇಲ್ಲಿನ ಕನ್ನಡ ಚಳವಳಿ, ಸಿನಿಮಾ ವಲಯಗಳು ಪತ್ರಿಕೋದ್ಯಮದ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿದ್ದವು.**
> **- ಪ್ರೊ. ಬಿ.ಕೆ. ರವಿ, ಕುಲಪತಿಗಳು, ಕೊಪ್ಪಳ ವಿಶ್ವವಿದ್ಯಾನಿಲಯ**

ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಬಿ.ಕೆ. ರವಿ ಮಾತನಾಡಿ, ವಾಣಿಜ್ಯೀಕರಣ, ಖಾಸಗೀರಕಣ, ತಂತ್ರಜ್ಞಾನದ ನಾಗಲೋಟದಲ್ಲಿ ಕನ್ನಡ ಪತ್ರಿಕೋದ್ಯಮ ನಲುಗುತ್ತಿದೆ. ಆದರೆ ಇನ್ನೂ ಮೂರು ದಶಕಗಳ ಕಾಲ ಕನ್ನಡ ಪತ್ರಿಕೋದ್ಯಮ ಜೀವಂತಿಕೆಯಿಂದ ಇರುತ್ತದೆ ಎಂಬ ಆಶಯ ವ್ಯಕ್ತಪಡಿಸಿದರು.

ಪತ್ರಕರ್ತರು ಸಾಮಾಜಿಕ ಹೊಣೆಗಾರಿಕೆ, ಬದ್ಧತೆಯಿಂದ ತಮ್ಮ ಜವಾಬ್ದಾರಿ ನಿಭಾಯಿಸಬೇಕಾಗಿದೆ. ದಾವಣಗೆರೆ ಜಿಲ್ಲೆಯು ಪತ್ರಿಕೋದ್ಯಮದ ಬೇರಾಗಿದ್ದು, ಇಲ್ಲಿನ ಕನ್ನಡ ಚಳವಳಿ, ಸಿನಿಮಾ ವಲಯಗಳು ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿದ್ದವು. ಹಿರಿಯ ಪತ್ರಿಕೋದ್ಯಮಿಗಳಾದ ಹೆಚ್. ಎನ್. ಷಡಾಕ್ಷರಪ್ಪ, ಸಿ.ಕೇಶಮೂರ್ತಿ, ಕಾಂ. ಪಂಪಾಪತಿ ಅವರಂತಹ ಹಿರಿಯ ಪತ್ರಕರ್ತರು ಸ್ಥಳೀಯ ಜಿಲ್ಲಾಮಟ್ಟದ ಪತ್ರಿಕೆಗಳನ್ನು ಹೊರ ತರುವ ಮೂಲಕ ಪತ್ರಿಕೋದ್ಯಮನ್ನು ಉತ್ತುಂಗಕ್ಕೆ ಕೊಂಡೊಯ್ದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ನುಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಈಶ್ವರೀಯ ವಿಶ್ವವಿದ್ಯಾಲಯದ ಶಿವಮೊಗ್ಗ ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಅನುಸೂಯಾಜಿ ಮಾತನಾಡಿ, ಸಮಾಜದ ಒರೆಕೋರೆಗಳನ್ನು ತಿದ್ದುವವರು ಪತ್ರಿಕಾ ಮಾಧ್ಯಮದವರು. ಸಮಾಜದಲ್ಲಿನ ಪ್ರತಿಯೊಬ್ಬರನ್ನು ಎಚ್ಚರಿಸುವ ಕೆಲಸ ಮಾಡಬೇಕಾಗಿದೆ. ಸಮಾಜದ ಸ್ವಾಸ್ಥ್ಯ ಕಾಪಾಡುವ ನಿರ್ಮಾತೃ ಪತ್ರಕರ್ತರು ಎಂದು ಬಣ್ಣಿಸಿದರು.

ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿದರು. ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್, ಜಿಲ್ಲಾ ವಾರ್ತಾಧಿಕಾರಿ ಬಿ. ಧನಂಜಯ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ರಾಜ್ಯಸಮಿತಿ ಸದಸ್ಯ ಕೆ. ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ. ಒಡೆಯರ್ ಮತ್ತಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಾಧಕರಾದ ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್, ವ್ಯಂಗ್ಯ ಚಿತ್ರಕಾರ ಹೆಚ್. ಬಿ.ಮಂಜುನಾಥ್, ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಬಡದಾಳ್, ಚನ್ನಗಿರಿ ತಾಲ್ಲೂಕು ಕೆಯುಡಬ್ಲ್ಯೂಜೆ ನೂತನ ಅಧ್ಯಕ್ಷ ವಿ. ಲಿಂಗರಾಜ್ ಅವರುಗಳನ್ನು ಗೌರವಿಸಲಾಯಿತು.

ಮಾಧ್ಯಮ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಮಂಜುನಾಥ್ ಕಾಡಜ್ಜಿ, ಬಸವರಾಜ ದೊಡ್ಮನಿ, ವಿಜಯಕುಮಾರ್ ಜಾಧವ್, ಕೆ.ಜೆ. ದಾನೇಶ್, ಹೆಚ್. ನಿಂಗಪ್ಪ, ಹೆಚ್.ಜಿ. ರುದ್ರೇಶಿ, ಎಸ್.ಎನ್. ಮಹೇಶ್ ಕಾಶೀಪುರ, ಟಿ.ಕೆ. ದಿನೇಶ್ ಬಾಬು, ಹರಿಹರದ ಇನಾಯತ್ ವುಲ್ಲಾ, ಚನ್ನಗಿರಿಯ ಟಿ.ಎನ್. ಜಗದೀಶ್, ಹೊನ್ನಾಳಿಯ ಹೆಚ್.ಸಿ. ಮೃತ್ಯುಂಜಯ ಪಾಟೀಲ್, ಜಗಳೂರಿನ ಅಣಬೂರು ಮಠದ ಕೊಟ್ರೇಶ್, ನ್ಯಾಮತಿಯ ಎಂ.ಎಸ್. ಶಾಸ್ತ್ರಿ ಹೊಳೆಮಠ ಅವರುಗಳಿಗೆ 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಿ. ಕೆ.ಎಂ. ಗಗನ್ ಪ್ರಾರ್ಥನೆಯ ನಂತರ ಪ್ರಧಾನ ಕಾರ್ಯದರ್ಶಿ ಎ. ಫಕೃದ್ದೀನ್ ಸ್ವಾಗತಿಸಿದರು. 'ಜನತಾವಾಣಿ' ಹಿರಿಯ ಪತ್ರಕರ್ತ ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ ಕಾರ್ಯಕ್ರಮ ನಿರೂಪಿಸಿದರು. ಖಜಾಂಚಿ ಎನ್. ವಿ. ಬದರಿನಾಥ್ ವಂದಿಸಿದರು.

## 14ನೇ ವಾರ್ಡ್‌ನಲ್ಲಿ 1 ಕೋಟಿ ರೂ. ಕಾಮಗಾರಿಗಳಿಗೆ ಎಸ್ಸೆಸ್ ಚಾಲನೆ



ದಾವಣಗೆರೆ, ಸೆ.16- ನಗರದ 14ನೇ ವಾರ್ಡ್‌ನಲ್ಲಿ 1 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಭೂಮಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸಿದ್ಧರಾಮಯ್ಯ ಉತ್ತಮ ಆಡಳಿತಗಾರರಾಗಿದ್ದು, ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದಾರೆ ಎಂದರು.

ಸಿದ್ದರಾಮಯ್ಯ ಇರುವುದರಿಂದಲೇ ರಾಜ್ಯದ ಹಣಕಾಸು ಪರಿಸ್ಥಿತಿ ಉತ್ತಮವಾಗಿದೆ. 5 ಗ್ಯಾರಂಟಿಗಳನ್ನು ನೀಡಿದ್ದರೂ ಸಹ ಸರ್ಕಾರದಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಆಗುತ್ತಿದೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ ಕಳೆದ 1 ವರ್ಷದಿಂದ ಸುಮಾರು 30 ಕೋಟಿ ಅನುದಾನ ತರಲಾಗಿದೆ. ಈ ಅನುದಾನದಲ್ಲಿ ಕ್ಷೇತ್ರದ 50ಕ್ಕೂ ಹೆಚ್ಚು ಶಾಲಾ ಕೊಠಡಿಗಳು, ದೇವಸ್ಥಾನಗಳು, ಸಮುದಾಯ ಭವನ, ಶಾದಿಮಹಲ್ , ರಸ್ತೆ ಮತ್ತು ಒಳಚರಂಡಿ ಅಭಿವೃದ್ಧಿ ಮಾಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಾಪೌರರಾದ ವಿನಾಯಕ ಪೈಲ್ವಾನ್, ಸದಸ್ಯ ಕೆ.ಚಮನ್‌ಸಾಬ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಜಗದೀಶ್, ಆಯುಕ್ತೆ ರೇಣುಕಾ, ಇಟ್ಟಿಗುಡಿ ಮಂಜುನಾಥ್, ಸ್ಥಳೀಯ ಮುಖಂಡರಾದ ಹಾಸಬಾವಿ ರಾಜಣ್ಣ ಹಾಗೂ ಇತರರಿದ್ದರು.

## ಎರಡು ಕೋಮಿನ ಯುವಕರ ಮಧ್ಯೆ ವಾಗ್ವಾದ: ಪ್ರಕರಣ ದಾಖಲು

ದಾವಣಗೆರೆ, ಸೆ.16- ಇಲ್ಲಿನ ಅಜಾದ್ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ ಒಂದೇ ಕಡೆ ಧ್ವಜ ಕಟ್ಟುವ ವಿಚಾರದಲ್ಲಿ ಎರಡು ಕೋಮಿನ ಯುವಕರ ನಡುವೆ ವಾಗ್ವಾದ ನಡೆದಿದೆ.

ಕೂಡಲೇ ಮಧ್ಯ ಪ್ರವೇಶಿಸಿರುವ ಪೊಲೀಸರು, ಎರಡೂ ಕೋಮಿನ ಧ್ವಜಗಳನ್ನು ತೆರವುಗೊಳಿಸಿದ್ದು, ಪರಿಸ್ಥಿತಿ ಶಾಂತವಾಗಿದೆ.

ಈ ಸಂಬಂಧ ಎರಡೂ ಕೋಮಿನ ಕಡೆಯಿಂದ ಒಟ್ಟು 8 ಜನರ ವಿರುದ್ಧ ಮುಂಜಾಗ್ರತಾ ಕ್ರಮವಾಗಿ ಭದ್ರತಾ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

## ಸಚಿವ ಎಸ್ಸೆಸ್ಸೆಂ ಜನ್ಮದಿನ: ಜಿಲ್ಲಾ ಕಾಂಗ್ರೆಸ್‌ನಿಂದ ಸಾಮಾಜಿಕ ಕಾರ್ಯ



ದಾವಣಗೆರೆ, ಸೆ. 16- ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ 57ನೇ ಜನ್ಮದಿನಾಚರಣೆ ಹಿನ್ನೆಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ವಿವಿಧ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆವರಗೆರೆಯಲ್ಲಿರುವ ಗೋಶಾಲೆಯಲ್ಲಿ ಗೋವುಗಳಿಗೆ ಮೇವು ವಿತರಣೆ ಮೂಲಕ ಸಾಮಾಜಿಕ ಕಾರ್ಯಕ್ರಮಗಳನ್ನು ಇಂದು ಆರಂಭಿಸಲಾಗಿದೆ ಎಂದರು.

ಆಶಾಕಿರಣ ಟ್ರಸ್ಟ್ ಮಕ್ಕಳಿಗೆ ಸಿಹಿ ವಿತರಣೆ, ವನಿತಾ ಸಮಾಜದ ಹಿರಿಯ ನಾಗರಿಕರಿಗೆ ಸೀರೆ ವಿತರಣೆ, ಅನ್ನ ಸಂತರ್ಪಣೆ, ವೀರೇಶ್ವರ ಪುಣ್ಯಾಶ್ರಮದ ಮಕ್ಕಳಿಗೆ ಬಟ್ಟೆ ವಿತರಣೆ, ಅಂಧ ಹೆಣ್ಣು ಮಕ್ಕಳ ಶಾಲೆಯಲ್ಲಿ ಸಿಹಿ ಊಟ ವಿತರಣೆ, ಐಎಂಎ ಹಾಲ್‌ನಲ್ಲಿ ರಕ್ತದಾನ ಮೊದಲಾದ ಕಾರ್ಯಕ್ರಮಗಳು ನಡೆಯಲಿವೆ ಎಂದು ತಿಳಿಸಿದರು.

ಮಲ್ಲಿಕಾರ್ಜುನ್ ಅವರು ಮೂರು ಬಾರಿ ಸಚಿವರಾಗಿ ಜಿಲ್ಲೆ ಹಾಗೂ ನಗರವನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ. ಕುಂದುವಾಡ ಕೆರೆ, ಆಶ್ರಯ ಮನೆಗಳು, ಗ್ಲಾಸ್ ಹೌಸ್, ಗೋಶಾಲೆ, ಸಿಮೆಂಟ್ ರಸ್ತೆಗಳು ಅವರ ಅಭಿವೃದ್ಧಿ ಕಾರ್ಯಗಳಿಗೆ ಕನ್ನಡಿಯಾಗಿವೆ.

ಅವರ ಸೇವೆ ಜಿಲ್ಲೆಗೆ ಮತ್ತಷ್ಟು ಸಿಗಲಿ ಎಂದು ಪ್ರಾರ್ಥಿಸಿ ನಗರದ ವಿವಿಧ ವಾರ್ಡುಗಳಲ್ಲಿ ಭೂತ್ ಮಟ್ಟದ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಲಿದ್ದಾರೆ ಎಂದು ಅವರು ತಿಳಿಸಿದರು.


ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ಮುಖಂಡರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಕೆ.ಜಿ. ಶಿವಕುಮಾರ್, ಮಂಗಳಮ್ಮ, ಮಂಜುಳಮ್ಮ, ರಾಘವೇಂದ್ರ ಗೌಡ, ರಾಜು ಭಂಡಾರಿ, ದ್ರಾಕ್ಷಾಯಣಮ್ಮ, ಶುಭ ಮಂಗಳ, ಡೋಲಿ ಚಂದ್ರು, ರಾಮಯ್ಯ, ರಾಜೇಶ್ವರಿ, ಚಂದ್ರಪ್ಪ ಇತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿಶ್ವಕರ್ಮ ಉತ್ಸವ

ವಿಶ್ವಕರ್ಮ ಸಮಾಜದ ವತಿಯಿಂದ ಕಾಳಿಕಾಂಬ ವಿಶ್ವಕರ್ಮ ಕಲ್ಯಾಣ ಮಂಟಪದಲ್ಲಿ ಭಗವಾನ್ ಶ್ರೀ ವಿಶ್ವಕರ್ಮ ಮಹೋತ್ಸವ ಇಂದು ನಡೆಯಲಿದೆ.ಬೆಳಿಗ್ಗೆ 5.30ಕ್ಕೆ ವಿಶ್ವಕರ್ಮ ಹೋಮ ನಡೆಯಲಿದ್ದು, ಬೆಳಿಗ್ಗೆ 10ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ, ಮೇಯರ್ ವಿನಾಯಕ ಪೈಲ್ವಾನ್, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್ ಹಾಗೂ ಜಿ.ಪಂ. ಸಿಇಓ ಸುರೇಶ್ ಬಿ. ಇಟ್ನಾಳ್ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12ಕ್ಕೆ ಕುಂಭೋತ್ಸವ, ಸ್ತಬ್ಧ ಚಿತ್ರ ಹಾಗೂ ಕಲಾ ತಂಡಗಳೊಂದಿಗೆ ಭಗವಾನ್ ವಿಶ್ವಕರ್ಮ ಮೂರ್ತಿಯ ಮೆರವಣಿಗೆ ನಡೆಯಲಿದೆ.

## ನಗರದಲ್ಲಿ ಇಂದು ಅನ್ನ ಸಂತರ್ಪಣೆ



ಕೆಟಿಜೆ ನಗರದ 3ನೇ ಮೇನ್, 17ನೇ ಕ್ರಾಸ್‌ನಲ್ಲಿ ಶ್ರೀ ಓಂಕಾರ ಯುವಕರ ಸಂಘದಿಂದ ಏರ್ಪಡಿಸಿರುವ ಗಣೇಶ ಮಹೋತ್ಸವದ ಪ್ರಯುಕ್ತ ಇಂದು ಮಧ್ಯಾಹ್ನ 12.30 ರಿಂದ ಅನ್ನ ಸಂತರ್ಪಣೆಯನ್ನು ಹಮ್ಮಿಕೊಳ್ಳಲಾಗಿದೆ.

18ರ ಬುಧವಾರ ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ, ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ 90% ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಮತ್ತು ರಾಜ್ಯಮಟ್ಟ, ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಕ್ರೀಡಾಪಟುಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ.

19ರ ಗುರುವಾರ ಸಂಜೆ 4 ಗಂಟೆಗೆ ಬೃಹತ್ ಶೋಭಾಯಾತ್ರೆಯ ಮೂಲಕ ಗಣಪತಿ ವಿಸರ್ಜನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ನೂಲು ಹುಣ್ಣಿಮೆ



ದಾವಣಗೆರೆ, ಸೆ. 16- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನೂಲು ಹುಣ್ಣಿಮೆ ಪ್ರಯುಕ್ತ ನಾಡಿದ್ದು ದಿನಾಂಕ 18ರ ಬುಧವಾರ ನವಗ್ರಹ ಹೋಮ, ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.


ಗೀತಮ್ಮ ಮತ್ತು ಟಿ. ಚಂದ್ರಶೇಖರ್ ಹೊಸಕುಂದುವಾಡ ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ನಾಳೆ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ

ರಾಣೇಬೆನ್ನೂರು, ಸೆ. 16 - ನಗರದ 24x7 ಕುಡಿಯುವ ನೀರು ಸರಬರಾಜಿನ ಮುಖ್ಯ ಕೊಳವೆ ಮಾರ್ಗದ ದುರಸ್ತಿ ಕಾರ್ಯ ನಡೆಯಲಿದ್ದು, ನಾಡಿದ್ದು ದಿನಾಂಕ 18 ಹಾಗೂ 19 ರಂದು ನಗರಕ್ಕೆ ನೀರು ಸರಬರಾಜು ಇರುವುದಿಲ್ಲ ಎಂದು ವಿಭಾಗದ ಅಧಿಕಾರಿ ಶೇಖರ ಹಾದಿಮನಿ ತಿಳಿಸಿದ್ದಾರೆ.

## ಹಾನಿಗೊಂಡ ಎಚ್.ಎಸ್. ರುದ್ರಪ್ಪ ಪ್ರತಿಮೆ





ಹೊನ್ನಾಳಿ, ಸೆ. 16 - ತಾಲ್ಲೂಕಿನ ಕಡದಕಟ್ಟೆ ಗ್ರಾಮದಲ್ಲಿ ನಿರ್ಮಾಣಗೊಂಡಿದ್ದ ಎಚ್.ಎಸ್. ರುದ್ರಪ್ಪನವರ ಕಲ್ಲಿನ ಪ್ರತಿಮೆ ಹಾನಿಗೊಂಡಿರುವ ಘಟನೆ ಇಂದು ಬೆಳಕಿಗೆ ಬಂದಿದೆ.

ರಾಜ್ಯದ ಜನತೆ ಪ್ರಜಾಪ್ರಭುತ್ವ ಸಂಭ್ರಮ ಆಚರಿಸುವ ಸಂದರ್ಭದಲ್ಲಿ ಈ ಘಟನೆ ಬೆಳಕಿಗೆ ಬಂದಿರುವುದು ವಿಪರ್ಯಾಸವೇ ಸರಿ. ರಾಜ್ಯ ಸರ್ಕಾರದಲ್ಲಿ ಕೃಷಿ, ಅರಣ್ಯ, ನೀರಾವರಿ, ತೋಟಗಾರಿಕೆ, ಕೈಗಾರಿಕೆ, ಪಶು ಸಂಗೋಪನ, ಮುಜರಾಯಿ ಸಚಿವರಾಗಿ ಕಾರ್ಯ ನಿರ್ವಹಿಸಿದವರ ಪ್ರತಿಮೆ ಇದಾಗಿದೆ.

ಘಟನೆ ಯಾವಾಗ? ಯಾರು ಕಾರಣ? ಎಂಬ ಸ್ಪಷ್ಟನೆ ಇಲ್ಲ. ಇಂದು ಬೆಳಗ್ಗೆ ಮಾಹಿತಿ ತಿಳಿದೊಡನೆ ರೈತ ಸಂಘದ ಅಧ್ಯಕ್ಷ ಅರಬಗಟ್ಟೆ ಬಸಪ್ಪ, ರೈತ ಮುಖಂಡ ಹಿರೇಮಠ ಬಸವರಾಜಪ್ಪ, ಕಡದಕಟ್ಟೆ ಜಗದೀಶ್, ಸೊರಟೂರ್ ನಿರಂಜನ್, ಮಾಸಡಿ ಭರಮಪ್ಪನವರು ಶಾಸಕ ಶಾಂತನಗೌಡರ ನಿವಾಸಕ್ಕೆ ತೆರಳಿ ಘಟನೆಯ ಬಗ್ಗೆ ಚರ್ಚಿಸಿರುವರು.

ರಾಜ್ಯ ರೈತ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿ, ಶಿವಮೊಗ್ಗ ಜಿಲ್ಲೆಯ ಮೊದಲ ಮಂತ್ರಿ ವಿಧಾನಸಭೆ ಸದಸ್ಯ -ಅಧ್ಯಕ್ಷರಾಗಿದ್ದರು. ಈಚೆಗೆ ನ್ಯಾಮತಿ ಮಹಾಂತೇಶ್ವರ ಕಲ್ಯಾಣ ಮಂಟಪದಲ್ಲಿ ಇವರ ಜೀವನ ಕುರಿತ 'ರೈತ ಕೃತಿ ಬಿಡುಗಡೆಗೊಳಿಸಿ' ಮುಂದಿನ ಯುವ ಪೀಳಿಗೆಗೆ ಸಭೆ ಮೂಲಕ ಇವರನ್ನು ಪರಿಚಯಿಸುವ ಪ್ರಯತ್ನ ನಡೆದಿತ್ತು. ಪ್ರತಿಮೆಯು ಹಾನಿಗೊಂಡ ಬಗ್ಗೆ ಕಾರಣ ಏನೆಂಬುದು ತಿಳಿದು ಬರಬೇಕಿದೆ?

## ಮಹಿಳಾ ಹಾಸ್ಟೆಲ್‌ಗಳಲ್ಲಿ ಸುರಕ್ಷತೆ ಕೊರತೆ



ದಾವಣಗೆರೆ, ಸೆ. 16- ನಗರದಲ್ಲಿ ಖಾಸಗಿ ಮಹಿಳಾ ವಸತಿ ನಿಲಯಗಳು ಹೆಚ್ಚಾಗುತ್ತಿದ್ದು, ಈ ನಿಲಯಗಳಲ್ಲಿ ಸುರಕ್ಷತೆ ಇಲ್ಲದಿರುವುದು ಆತಂಕದ ವಿಷಯವಾಗಿದೆ ಎಂದು ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ದೂರಿದ್ದಾರೆ.


ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು ಬಹುತೇಕ ಖಾಸಗಿ ಮಹಿಳಾ ವಸತಿ ನಿಲಯಗಳು ಸಂಬಂಧಿಸಿದ ಇಲಾಖೆಗಳಿಂದ ಪರವಾನಿಗೆ ಪಡೆಯದೆ ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಆರೋಪಿಸಿದ್ದಾರೆ.

ದಾವಣಗೆರೆ ಮಹಾನಗರಕ್ಕೆ ವಿದ್ಯಾರ್ಥಿನಿಯರು ಮತ್ತು ಕೆಲಸದ ಮೇಲೆ ಅಕ್ಕಪಕ್ಕದ ಊರುಗಳಲ್ಲದೇ ದೂರದ ಊರುಗಳಿಂದ ಮಹಿಳೆಯರು ಬರುತ್ತಿದ್ದಾರೆ. ಇದರಿಂದಾಗಿ ಖಾಸಗಿ ಮಹಿಳಾ ವಸತಿ ನಿಲಯಗಳ ಸಂಖ್ಯೆ ಹೆಚ್ಚುತ್ತಿವೆ. ಆದರೆ, ಬಹುತೇಕ ಖಾಸಗಿ ಹಾಸ್ಟೆಲ್‌ಗಳು ಸುರಕ್ಷತೆಯಿಂದ ಕೂಡಿಲ್ಲ.

ಮಹಿಳಾ ವಸತಿ ನಿಲಯಗಳು ನೀತಿ-ನಿಬಂಧನೆಗಳನ್ನು ಹೊಂದಿರಬೇಕು. ಪರವಾನಿಗೆ ಪಡೆದಿರಬೇಕು. ಸುರಕ್ಷತೆ ಹೊಂದಿರಬೇಕು. ಆದರೆ, ಇದ್ಯಾವುದೇ ಇಲ್ಲದೇ, ಎಗ್ಗಿಲ್ಲದೇ ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದು, ಸಂಬಂಧಿತ ಅಧಿಕಾರಿಗಳು ಗಮನಹರಿಸದಿರುವುದು ದುರ್ದೈವದ ಸಂಗತಿ.

ಈ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತರು ತಕ್ಷಣ ಗಮನ ಹರಿಸಬೇಕು ಎಂದು ನಾಗರಾಜ್ ಒತ್ತಾಯಿಸಿರುವ ಅವರು, ವಿದ್ಯಾರ್ಥಿನಿಯರ ಪೋಷಕರು ಕೂಡಾ ಖಾಸಗಿ ವಸತಿ ನಿಲಯಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಕೇಳಿಕೊಂಡಿದ್ದಾರೆ.

## ನಾಳೆ ಶ್ರೀ ಗಾಯತ್ರಿ ಪೂಜೆ ಉಪಾಸನೆ



ದಾವಣ ಗೆರೆ, ಸೆ. 16 - ನಗರದ ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಆಧ್ಯಾತ್ಮ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದಿಂದ ಸಾಮೂಹಿಕ ಶ್ರೀ ಗಾಯತ್ರಿ ಪೂಜೆ, ಉಪಾಸನೆ, ಅನಂತನ ಹುಣ್ಣಿಮೆ ಅಂಗವಾಗಿ ನಾಡಿದ್ದು ದಿನಾಂಕ 18ರ ಬುಧವಾರ ಬೆಳಿಗ್ಗೆ 7ಕ್ಕೆ ಶ್ರೀ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರ ಮಠದಲ್ಲಿ ನಡೆಯಲಿದೆ ಎಂದು ಪರಿವಾರದ ಪರಿವಾರದ ಅಧ್ಯಕ್ಷ ಡಾ. ರಮೇಶ್ ಪಟೇಲ್ ತಿಳಿಸಿದ್ದಾರೆ. ಎಂ. ವೀರಭದ್ರರಾವ್ ಮತ್ತು ಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ.

## ಮಂಜುನಾಥ್ ಪಿ.ಇ ನಿಧನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್ ವಾಸಿ
ನಿವೃತ್ತ ವಿಜಯ ಬ್ಯಾಂಕ್ ನೌಕರರು

**ಶ್ರೀ ಮಂಜುನಾಥ್ ಪಿ.ಇ**

ಇವರು ದಿನಾಂಕ 16.09.2024ರ ಸೋಮವಾರ ಸಂಜೆ 4.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 77 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 17.09.2024 ಮಂಗಳವಾರ ಮಧ್ಯಾಹ್ನ 1.30ಕ್ಕೆ ಹೊಳಲ್ಕೆರೆ ತಾಲ್ಲೂಕು ಬಿದುರ್ಗಾ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 97429 12004**


**ಬೇಕಾಗಿದ್ದಾರೆ**

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

**ಶಾಂತಲಾ** ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327





KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas